ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

ಋಷಿಗಳು ಹೇಳಿಕೊಟ್ಟಂತೆ
ನಾವು ಧ್ಯಾನವನ್ನು ಕಲಿಸುತ್ತೇವೆ.

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದ್ದಾರೆ.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

# ತಪೋವಾಣಿ

ಸಂ. 9 ಸಂ. 8 ಆಗಸ್ಟ್ 2012 ರೂ.25

## ಅನಿಸಿಕೆಗಳು

ಗುರೂಜಿ ಕೃಷ್ಣಾನಂದ
ಅನು: ಶ್ಯಾಮಲಾದೇವಿ

ಸದ್ಯದಲ್ಲೇ ಮಹತ್ತರ ಬದಲಾವಣೆಗಳು ಸಂಭವಿಸಲಿವೆ ಎಂಬ ವಾಸ್ತವಕ್ಕೆ, ಜನ ಈಗ ಜಾಗೃತರಾಗುತ್ತಿದ್ದಾರೆ. ಬೆಳಕಿನ ಕಾರ್ಯದಲ್ಲಿ ತೊಡಗಿರುವವರು, ಈ ವರ್ಷದ ಕೊನೆಯಲ್ಲಿ ಅಥವಾ ನಂತರ, ಬದಲಾವಣೆಗಳು ಸಂಭವಿಸುವುದರ ಬಗ್ಗೆ ದೃಢ ವಿಶ್ವಾಸ ಹೊಂದಿದ್ದಾರೆ. ಮತ್ತು, ಋಷಿಗಳು ಅಥವಾ ಬೆಳಕಿನ ಮಾಸ್ಟರ್‌ಗಳಡಿಯಲ್ಲಿ ಕೆಲಸ ಮಾಡುತ್ತಿರುವ ನಮಗೆ, ನಾವು ಹೊಸ ಯುಗವನ್ನು ಪ್ರವೇಶಿಸುವ ಬದಲಾವಣೆಯ ಕಾಲದಲ್ಲಿದ್ದೇವೆ ಎನ್ನುವುದರ ಅರಿವಿದೆ. ಬದಲಾವಣೆಯ ಪ್ರಕ್ರಿಯೆಗಳು ಕೆಲವು ವರ್ಷಗಳ ಹಿಂದೆಯೇ ಪ್ರಾರಂಭವಾದವು ಮತ್ತು ಈಗ ಅವು ಗಾಢವಾಗುತ್ತಿವೆ. ಸಂಪೂರ್ಣ ಬದಲಾವಣೆ ಈ ವರ್ಷದ ಕೊನೆಯಲ್ಲಿ ಕೂಡಲೇ ಸಂಭವಿಸಬಹುದು ಅಥವಾ ಅದು ಹಂತಹಂತವಾಗಿ ಕೆಲವು ವರ್ಷಗಳವರೆಗೆ ಚಾಚಬಹುದು. ಇದು ನಮಗೆ ಇನ್ನೂ ಸ್ಪಷ್ಟವಾಗಿ ತಿಳಿದಿಲ್ಲ. ಈ ಪ್ರಕ್ರಿಯೆಗಳನ್ನು ಮೇಲ್ವಿಚಾರಣೆ ಮಾಡುತ್ತಿರುವ ಮಾಸ್ಟರ್‌ಗಳು ಇದರ ಬಗ್ಗೆ ಇನ್ನೂ ಯಾವ ನಿರ್ಧಾರವನ್ನೂ ತೆಗೆದುಕೊಂಡಿಲ್ಲ.

ಈ ಅವಧಿ, ಅವಕಾಶಗಳ ಮಹತ್ವದ ಅವಧಿ ಎನ್ನುವುದನ್ನು ನಾವು ಮನಗಾಣಬೇಕು. ಇದು ಆಧ್ಯಾತ್ಮಿಕವಾಗಿ ಶೀಘ್ರವಾಗಿ ಬೆಳೆಯಲು ಇರುವ ಅವಕಾಶ. ಎಂದಾದರೊಂದು ದಿನ ನಾವು ಅಧ್ಯಾತ್ಮೀಕರಿಸಲೇಬೇಕು. ನಾವು ಒಳ್ಳೆಯವರು, ಪ್ರಾಮಾಣಿಕರು ಮತ್ತು ಶಾಂತಿಯುತರು ಆಗಬೇಕು. ಹೊಸ ಯುಗವನ್ನು ಪ್ರವೇಶಿಸುವುದು ಮತ್ತು ಬದುಕುವುದು ನಿಶ್ಚಿತವಾಗಿ ಆಗಲೇಬೇಕು. ಇದನ್ನು ಆಯ್ಕೆ ಮಾಡದವರು ಮತ್ತು ಬದಲಾಗದವರು ನಾಶವಾಗುತ್ತಾರೆ. ಇದು ನಾವು ಮನಗಾಣಬೇಕಾದ ಒಂದು ವಾಸ್ತವ.

ಬದಲಾವಣೆಯ ಈ ಅವಧಿಯಲ್ಲಿ, ವಿವಿಧ ಪ್ರಕ್ರಿಯೆಗಳು ಕೆಲಸಮಾಡಲು ಪ್ರಾರಂಭಿಸುತ್ತವೆ. ನಾವು ವೈಯಕ್ತಿಕ ಮಟ್ಟದಲ್ಲಿ ಒಂದು ಬಗೆಯ ಆಂತರಿಕ ಕೋಲಾಹಲಕ್ಕೆ ಒಳಗಾಗಬಹುದು ಮತ್ತು ಇದು, ಕುಟುಂಬದಿಂದ ಪ್ರಾರಂಭವಾಗಿ ಸಮಾಜ, ರಾಷ್ಟ್ರ ಮತ್ತು ಭೂಮಂಡಲದವರೆಗೆ, ಎಲ್ಲ ಮಟ್ಟಗಳಲ್ಲೂ ಆಗಬಹುದು. ಇದು, ಬದುಕಿನ ಹುಮ್ಮಸ್ಸನ್ನು ಸೋಲಿಸಲು ನಾವು ಅವಕಾಶ ಕೊಡಬಾರದು. ಈ ಕೋಲಾಹಲ ಸೃಷ್ಟಿಯಾಗಿರುವುದು, ನಾವು ಬದುಕು, ಮೌಲ್ಯ ವ್ಯವಸ್ಥೆ, ಜೀವನದ ಗುರಿ, ಸಾವಿನ ನಂತರದ ಬದುಕು, ಹೊಸ ಯುಗ ಮತ್ತು ಅಂಥ ಅನೇಕ ವಾಸ್ತವಗಳ ಬಗ್ಗೆ ಚಿಂತನೆ ಮಾಡಲಿ ಎಂದು. ಈವರೆಗೆ ನಾವು ಇವನ್ನು ಅರ್ಥಮಾಡಿಕೊಳ್ಳುವ ಗೊಡವೆಗೇ ಹೋಗಿರಲಿಲ್ಲ. ಇವನ್ನು ಅರ್ಥಮಾಡಿಕೊಳ್ಳುವುದು ಮತ್ತು ಸರಿಯಾದ ಶಾಂತಿಯುತ ಬಾಳ್ವೆಯನ್ನು ನಡೆಸುವ ಪಾಠಗಳನ್ನು ಕಲಿಯುವುದು, ಎಲ್ಲ ಮಟ್ಟಗಳಲ್ಲಿ ಆಗುತ್ತಿರುವ ಎಲ್ಲ ಬಗೆಯ ಕೋಲಾಹಲಗಳ ಗುರಿ. ಒಮ್ಮೆ ನಾವು ಇವನ್ನು ಅರಿತು ಸರಿಯಾದ ರೀತಿಯಲ್ಲಿ ಬದುಕಲು ಪ್ರಾರಂಭಿಸಿದರೆ, ಕೋಲಾಹಲ ಮಾಯವಾಗುತ್ತದೆ. ಆಗ, ವಿಶ್ವ ನಮ್ಮ ಕೈಗಳನ್ನು ಹಿಡಿದುಕೊಂಡು, ಕೃಪೆ ಮತ್ತು ಪ್ರೀತಿಯ ಮಳೆಗರೆದು, ನಮ್ಮನ್ನು ಉನ್ನತ ಬದುಕಿನತ್ತ ಕರೆದೊಯ್ಯುತ್ತದೆ.

ಅನೇಕ ಅಜ್ಞಾತ ವಾಸ್ತವಗಳ ಬಗ್ಗೆ ಅಮರರವರು ಅಪರೂಪದ ಮತ್ತು ಅತ್ಯವಶ್ಯಕವಾದ ಜ್ಞಾನವನ್ನು ನಮಗೆ ಒದಗಿಸಿ ಕೊಟ್ಟಿದ್ದಾರೆ. ಇದರೊಂದಿಗೆ, ಒಂದು ಹೊಸ ಉಪನಿಷತ್ತನ್ನು ನಾವು ಸೇರಿಸಬಹುದು. ಅವರು ಮತ್ತು ಮಹಾನ್ ಋಷಿಗಳು, ಹೊಸ ಯುಗವನ್ನು ಪ್ರವೇಶಿಸಲು ಬೇಕಾದ ಹೊಸ ಜ್ಞಾನ ಮತ್ತು ತಂತ್ರಗಳನ್ನು ನಮಗೆ ಒದಗಿಸಿ ಕೊಡುತ್ತಿದ್ದಾರೆ. ನಾವು ಇದನ್ನು ಅರ್ಥ ಮಾಡಿಕೊಳ್ಳಬೇಕು ಮತ್ತು ಯಾವುದೇ ವಾಣಿಜ್ಯಾಸಕ್ತಿಗಳಿಲ್ಲದೆ ಹಾಗೂ ಬಲವಂತವಾಗಿ ಹೇರದೆ, ಇತರರಿಗೆ ಇದನ್ನು ನೀಡಲು ಪ್ರಯತ್ನಿಸಬೇಕು. ಇದು 'ಬೆಳಕಿನಿಂದ ಕ್ರಾಂತಿ'ಯ ಒಂದು ಭಾಗ. ಜ್ಞಾನ, ಬೆಳಕಿನ ಒಂದು ಭಾಗ. ■

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560077. ಭಾರತ.
© (080) 2846 5280, 99000 75280 (ಬೆಳಗ್ಗೆ 10ರಿಂದ ಮಧ್ಯಾಹ್ನ 1)
ಇ-ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ

### ಆನೇಕಲ್‌ನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ) ಪ್ರಕಾಶ್‌ಮಾರ್ಗ್ (ಮರಾಠಿ) ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/- ಡಿಡಿಯನ್ನು **'Manasa Light Age Foundation'** ಹೆಸರಿನಲ್ಲಿ ಕಳುಹಿಸಬೇಕು. ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



14 ಜೂಲೈ 2012 ತಪೋನಗರ ವ್ಯಾಪ್ತಿಯಲ್ಲಿ ಹರಡಿದ್ದ ಪ್ಲಾಸ್ಟಿಕ್ ಕವರ್ ಮತ್ತು ಪೇಪರ್‌ಗಳನ್ನು ತಪೋನಗರ ನಿವಾಸಿಗಳ ಒಂದು ತಂಡ, ಆಯ್ದು ತೆಗೆದರು.

### ಸುದ್ದಿ-ಸೂಚನೆ

- ಶಂಬಲ ಗ್ರೂಪ್ ಮತ್ತು 'ರಾ' ಗ್ರೂಪ್‌ನ ಸಾಧಕರು, ಜುಲೈ ತಿಂಗಳ 2ನೇ ಮತ್ತು 3ನೇ ಭಾನುವಾರದಂದು ಗುರೂಜಿಯವರಿಂದ ದೀಕ್ಷೆ ಮತ್ತು ಮಾರ್ಗದರ್ಶನ ಪಡೆಯಲು ತಪೋನಗರದಲ್ಲಿ ಸೇರಿದ್ದರು.
- 26-8-2012ರಂದು ಅಮರರವರ ಮಹಾಸಮಾಧಿ ಕಾರ್ಯಕ್ರಮವನ್ನು ತಪೋನಗರದಲ್ಲಿ ಆಯೋಜಿಸಲಾಗಿದೆ. ಭಾಗವಹಿಸಲು ಇಚ್ಛಿಸುವವರು ದಿನಾಂಕ 23-8-2012 ರೊಳಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು.
- 3-7-2012ರಂದು ಮಧ್ಯಾಹ್ನ 12ರಿಂದ 1ರವರೆಗಿನ ಗುರುಪೂರ್ಣಿಮಾ ವಿಶೇಷ ಧ್ಯಾನದಲ್ಲಿ 200ಕ್ಕೂ ಹೆಚ್ಚು ಧ್ಯಾನಿಗಳು ತಪೋನಗರದಲ್ಲಿ ಮತ್ತು ಸಪ್ತರ್ಷಿ ಧ್ಯಾನಕೇಂದ್ರ, ಆನೇಕಲ್‌ನಲ್ಲಿ ಭಾಗವಹಿಸಿದ್ದರು.

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 02 | ಗುರು | ಪೂರ್ಣಿಮಾ |
| 09 | ಗುರು | ಶ್ರೀಕೃಷ್ಣ ಜನ್ಮಾಷ್ಟಮಿ |
| 15 | ಬುಧ | ಮಾಸ ಶಿವರಾತ್ರಿ |
| 17 | ಶುಕ್ರ | ಅಮಾವಾಸ್ಯೆ |
| 25 | ಶನಿ | ಅಮರರವರ ಮಹಾಸಮಾಧಿ ದಿನ ಶುಕ್ಲ ಅಷ್ಟಮಿ |
| 26 | ಭಾನು | ಅಮರರವರ ಮಹಾಸಮಾಧಿ ಕಾರ್ಯಕ್ರಮ ಶುಕ್ಲ ದಶಮಿ |
| 31 | ಶುಕ್ರ | ಪೂರ್ಣಿಮಾ |

ಗುರೂಜಿಯವರ ಭಾನುವಾರದ ಉಪನ್ಯಾಸಗಳ ನೇರ ಪ್ರಸಾರವು ವೆಬ್‌ನಲ್ಲಿ ಮೆಂಬರ್‌ಗಳಿಗೆ ಲಭ್ಯವಿದೆ. ಇದರ ಮಾಹಿತಿಗಾಗಿ ಇ-ಮೇಲ್ ಮುಖಾಂತರ ಸಂಪರ್ಕಿಸಬಹುದು.

### ಈ ತಿಂಗಳು ತಪೋನಗರದಲ್ಲಿ

ಭಾನುವಾರಗಳು: ಉಪನ್ಯಾಸಗಳು: ಬೆಳಿಗ್ಗೆ 11-12
ವಿಶೇಷ ಧ್ಯಾನ & ಲೈಟ್ ಚಾನಲಿಂಗ್: ಮಧ್ಯಾಹ್ನ 12-1
09-08-12 ಶ್ರೀಕೃಷ್ಣ ಜನ್ಮಾಷ್ಟಮಿ
ವಿಶೇಷ ಧ್ಯಾನ : ಮಧ್ಯಾಹ್ನ 12-1
26-08-12 ಅಮರರವರ ಮಹಾಸಮಾಧಿ ಕಾರ್ಯಕ್ರಮ

### ಅಮರರವರ ಮಹಾಸಮಾಧಿ ಕಾರ್ಯಕ್ರಮ
### 26-8-2012, ಭಾನುವಾರ

ಬೆಳಿಗ್ಗೆ 11 ಕ್ಕೆ ಸ್ವಾಗತ ಭಾಷಣ
ಭಾಷಣಗಳು
ಗುರೂಜಿಯವರ ನುಡಿಗಳು
ವಿಶೇಷ ಧ್ಯಾನ
ಗುರೂಜಿಯವರಿಂದ ಆಶೀರ್ವಾದ
ಮಧ್ಯಾಹ್ನ 12.30ಕ್ಕೆ ಪ್ರಸಾದ

11-8-2012 ರಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 1ರವರೆಗೆ ಗುರೂಜಿಯವರೊಂದಿಗೆ 'ಅನೌಪಚಾರಿಕ ಸಭೆ' ಇರುತ್ತದೆ. ಭಾಗವಹಿಸಲು ಆಸಕ್ತಿ ಇರುವವರು ತಮ್ಮ ಹೆಸರನ್ನು ನಮ್ಮ ಆಫೀಸಿನಲ್ಲಿ ರಿಜಿಸ್ಟರ್ ಮಾಡಬೇಕು.

ಈಗ www.lightagemasters.com ವೆಬ್‌ಸೈಟ್ ಮೂಲಕ ಹೊರದೇಶಗಳಲ್ಲಿ ವಾಸಿಸುವ ನಮ್ಮ ಸಾಧಕರು ತಮ್ಮ ಕ್ರೆಡಿಟ್ ಕಾರ್ಡ್‌ಗಳನ್ನು ಬಳಸಿ ಆನ್‌ಲೈನ್‌ನಲ್ಲಿ ಹಣ ಕಳುಹಿಸುವ ವ್ಯವಸ್ಥೆಯನ್ನು ಒದಗಿಸಲಾಗಿದೆ.

ಈಗ ಗುರೂಜಿಯವರು 'Speaking Tree' ಯ ಮಾಸ್ಟರ್‌ಗಳ ಸಾಲಿಗೆ ಸೇರ್ಪಡೆಯಾಗಿದ್ದಾರೆ. ಗುರೂಜಿಯವರ ಬ್ಲಾಗ್ ಓದಲು ಮತ್ತು ಅವರ ವಿಡಿಯೋಗಳನ್ನು ನೋಡಲು www.speakingtree.in ವೆಬ್‌ಸೈಟ್‌ಗೆ ಭೇಟಿನೀಡಿ.

## ಲೈಟ್ ಚಾನಲ್ ವಿಶ್ವಸಂಚಲನದ ಇತ್ತೀಚಿನ ಸುದ್ದಿ

- ಉತ್ಸಾಹದಲ್ಲಿ ಯುವತಿಯಂತಿರುವ ಓರ್ವ ಹಿರಿಯ ಲೈಟ್ ಚಾನಲಿಂಗ್ ಕಾರ್ಯಕರ್ತೆ ಲೈಟ್ ಮಾಸ್ಟರ್‌ಗಳಿಂದ ಪಡೆದ ಬೆಳಕನ್ನು ಹರಡಲು, ತಮ್ಮ ದಿನವನ್ನು ಮುಂಜಾನೆಯಲ್ಲಿ ಡಜನ್‌ಗಟ್ಟಲೆ ಶಾಲೆಗಳಿಗೆ ಭೇಟಿ ನೀಡುವುದರ ಮೂಲಕ ಆರಂಭಿಸುತ್ತಾರೆ. ಹಲವೆಡೆ ಲೈಟ್ ಚಾನಲಿಂಗ್ ಮಾಡಲು ಅವಕಾಶ ನೀಡದಿದ್ದರೂ, ಎಂದೂ ಬತ್ತದ ಉತ್ಸಾಹದಿಂದ ಕೆಲಸ ಮಾಡುತ್ತಾರೆ. ಇದಕ್ಕಾಗಿ ಕೆಲವುದಿನ ಅವರು ತಮ್ಮ ಕಾರಿನಲ್ಲಿ ನೂರಕ್ಕೂ ಹೆಚ್ಚು ಕಿಲೋಮೀಟರ್‌ನಷ್ಟು ಪ್ರಯಾಣಿಸುತ್ತಾರೆ. ಈ ಕೆಲಸ ಸಂಜೆಯವರೆಗೂ ನಡೆಯುತ್ತಿರುತ್ತದೆ. ಲೈಟ್ ಮಾಸ್ಟರ್ಸ್ ಮೇಲೆ ಆಕೆ ಹೊಂದಿರುವ ಪ್ರೀತಿ, ಆಕೆಯ ಬದುಕಿಗೆ ಒಂದು ಉನ್ನತ ಅರ್ಥವನ್ನು ನೀಡಿದೆ. ಯಾವ ಮನ್ನಣೆಯನ್ನೂ ಬಯಸದೆ, ಈ ಕೆಲಸವನ್ನು ಮೌನವಾಗಿ ಮಾಡುತ್ತಿದ್ದಾರೆ.
- ಇಂಥ ಕಾರ್ಯಕರ್ತರುಗಳ ಪ್ರಯತ್ನಗಳಿಂದ, ಜೂನ್ ತಿಂಗಳಲ್ಲಿ ಸುಮಾರು 70 ಶಾಲೆಗಳಲ್ಲಿ 25,000ಕ್ಕೂ ಹೆಚ್ಚು ಮಕ್ಕಳಿಗೆ ಲೈಟ್ ಚಾನಲ್ ಮಾಡುವುದನ್ನು ಪರಿಚಯಿಸಿದ್ದಾರೆ ಹಾಗೂ ಸುಮಾರು 300 ಲೈಟ್ ಚಾನಲಿಂಗ್ ಸೆಶನ್‌ಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದಾರೆ. ■

## ಲೈಟ್ ಚಾನಲಿಂಗ್ ಅನುಭವಗಳು

ಅನೇಕ ಶಾಲೆಗಳಲ್ಲಿ ನಡೆಸುತ್ತಿರುವ ಲೈಟ್ ಚಾನಲ್ ಸೆಷನ್‌ಗಳು ಹೆಚ್ಚಿನ ವಿಶ್ವಾಸ ಮತ್ತು ಸಂತೋಷವನ್ನು ಉಂಟುಮಾಡಿದೆ. ನಾನು ದಿನನಿತ್ಯ S.S.C. ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡುವಾಗ, ದಿನವನ್ನು ಈ ತಂತ್ರದ ಅಭ್ಯಾಸದಿಂದ ಆರಂಭಿಸುತ್ತೇವೆ. ವಿದ್ಯಾರ್ಥಿಗಳು ಈ ವಿಧಾನವನ್ನು ಆನಂದಿಸುತ್ತಾರೆ ಮತ್ತು ಅವರು ಹೆಚ್ಚಿನ ಆತ್ಮವಿಶ್ವಾಸ ಮತ್ತು ಪುನಶ್ಚೇತನದಾಯಕ ಚೈತನ್ಯಗಳನ್ನು ಅನುಭವಿಸುತ್ತಾರೆ. ಅವರಲ್ಲಿ ಕೆಲವರಿಗೆ ಗಮನಾರ್ಹ ಅನುಭವಗಳಾಗಿವೆ.

ವಿವಾಹವಾಗಲಿರುವ ಒಬ್ಬ ಯುವತಿಗೆ ಕಿಡ್ನಿ ವೈಫಲ್ಯಗೊಂಡಿರುವುದು ಅನಿರೀಕ್ಷಿತವಾಗಿ ತಿಳಿಯಿತು. ಅಂದಿನಿಂದ ಪ್ರತಿದಿನ ಸುಮಾರು 80 ವಿದ್ಯಾರ್ಥಿಗಳು ಪ್ರಾಮಾಣಿಕವಾಗಿ ಲೈಟ್ ಚಾನಲ್ ಮಾಡುತ್ತಿದ್ದಾರೆ. ಈಗ ಆಕೆಯ ಕಿಡ್ನಿ ಶೇಕಡಾ 25ರಷ್ಟು ಕೆಲಸ ಮಾಡಲು ಆರಂಭಿಸಿದೆ ಎಂದು ತಿಳಿದು ಬಂದಿದೆ.

ಇತ್ತೀಚೆಗೆ ಒಬ್ಬ ವಿದ್ಯಾರ್ಥಿಯ ತಂದೆ ಅಪಾಯಕರವಾದ ಅಪಘಾತಕ್ಕೊಳಗಾದರು. ಆಗ ನಾವು ಲೈಟ್ ಚಾನಲ್ ಮಾಡಲು ಆರಂಭಿಸಿದೆವು. ನಂತರ ಅವರು ಅಪಾಯದಿಂದ ಪಾರಾಗಿ, ಶೀಘ್ರವಾಗಿ ಗುಣಮುಖರಾಗುತ್ತಿದ್ದಾರೆ.

ನಾಲ್ಕು ವರ್ಷದ ಬಾಲಕಿಯೊಬ್ಬಳಿಗೆ ಆಟೋರಿಕ್ಷಾವೊಂದು ಭೀಕರವಾಗಿ ಡಿಕ್ಕಿ ಹೊಡೆಯಿತು. ಬದುಕಿ ಉಳಿಯುವ ಸಾಧ್ಯತೆಗಳು ಕಡಿಮೆಯಾಗಿದ್ದರೂ, ನಾವು ಸಂಪೂರ್ಣ ನಂಬಿಕೆಯಿಂದ ಲೈಟ್ ಚಾನಲ್ ಮಾಡಿದೆವು. ಈಗ ಆಕೆ ಅಪಾಯದಿಂದ ಪಾರಾಗಿದ್ದಾಳೆ.

ಪ್ರಪಂಚಕ್ಕೆ ಇಂತಹ ಅಮೂಲ್ಯವಾದ ಕೊಡುಗೆಯನ್ನು ಪ್ರತಿಫಲಾಪೇಕ್ಷೆಯಿಲ್ಲದೆ ನೀಡಿದ ನಿಮಗೆ ನನ್ನ ಕೃತಜ್ಞತೆಗಳು.

– ಶ್ರೀಮತಿ ಜಯಂತಿ ನಟರಾಜನ್

## ತಪೋನಗರ ಡೈರಿ

**ಸೀಮಾ ಅಲ್‌ವೇಲ್ ಸೋಮಯಾಜಿ; ಅನು: ಪಾಂಡುರಂಗ**

ಮನುಕುಲದ ಭವಿಷ್ಯವನ್ನು ನಿರ್ಧರಿಸುವ ಬಹು ನಿರೀಕ್ಷಿತ ವರ್ಷದ ಅರ್ಧ ಭಾಗವನ್ನು ದಾಟುತ್ತಿರುವುದಕ್ಕೆ ಜೂನ್ ತಿಂಗಳು ಕುರುಹಾಗಿದೆ. ಜೂನ್ ತಿಂಗಳ ಆಗಮನ ನಮ್ಮನ್ನು ಆತ್ಮಾವಲೋಕನಕ್ಕೆ ತಳ್ಳಿದೆ. ಇದು ನಾಲ್ಕು ಘಂಟೆಗಳ ಕಾಲದ ಗ್ರಹಣದಿಂದ ಪ್ರಾರಂಭವಾಯಿತು. ತಪೋನಗರದಲ್ಲಿ ಲೈಟ್ ಚಾನಲ್ ಮಾಡುವುದಕ್ಕಾಗಿ ಬಹಳಷ್ಟು ಧ್ಯಾನಿಗಳು ಸೇರಿದ್ದರು. ಆ ಸೆಷನ್ ನಂತರ, ಧ್ಯಾನಿಗಳೆಲ್ಲರೂ ಟೀಗಾಗಿ ಸೇರಿದ್ದಾಗ, ಅವರ ಗಾಢ ಧ್ಯಾನದ ಆಳ, ನೋಡಬಲ್ಲವರಿಗೆ ಕಾಣಿಸುತ್ತಿತ್ತು.

ಮಾನಸ ಆಫೀಸಿನಲ್ಲಿ ಕೆಲಸ ಮಾಡುವವರ ಹುಟ್ಟುಹಬ್ಬದ ದಿನಗಳನ್ನು ಎಲ್ಲರೂ ಒಟ್ಟುಗೂಡಿ ಸಂಭ್ರಮಿಸುವ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಗುರೂಜಿಯವರ ಜೊತೆಗೆ ಸಂಭಾಷಿಸುವ ಮತ್ತೊಂದು ಅವಕಾಶ ಇದಾಗಿದೆ. ಜೂನ್ ತಿಂಗಳಲ್ಲಿ ಶ್ರೀ ಸುಧಾಕರ್‌ರವರ ಹುಟ್ಟುಹಬ್ಬವನ್ನು ಆಚರಿಸಲಾಯಿತು.

ತಪೋನಗರದಲ್ಲಿ ವಾಸಿಸುವವರ ಸಂಖ್ಯೆ ದಿನೇದಿನೇ ಹೆಚ್ಚುತ್ತಿದೆ. ಈಗ ಮೂವತ್ತು ಕುಟುಂಬಗಳಿವೆ. ಕಳೆದ ಮಹಾಯುಗ ಸಮಯದಲ್ಲಿ ಈ ಸ್ಥಳದಲ್ಲಿ ಮುನ್ನೂರು ಕುಟುಂಬಗಳಿದ್ದವು. ಶ್ರೀ ವಿಕಾಸ್ ಕಾರಂತ್‌ರವರು ತಮ್ಮ ಮನೆಯ ಗೃಹಪ್ರವೇಶದ ಸಂದರ್ಭದಲ್ಲಿ ಗುರೂಜಿಯವರನ್ನು ಮತ್ತು ಎಲ್ಲ ನಿವಾಸಿಗಳನ್ನು ಆಹ್ವಾನಿಸಿದ್ದರು. ಅವರ ಸುಂದರವಾದ ಮನೆಯಲ್ಲಿ ನಾವೆಲ್ಲರೂ ಲೈಟ್ ಚಾನಲ್ ಮಾಡುವುದರೊಂದಿಗೆ ಮನೆಯನ್ನು ಚೈತನ್ಯೀಕರಿಸಲಾಯಿತು. ಆ ಭಾನುವಾರ ಅವರು ಎಲ್ಲ ಧ್ಯಾನಿಗಳನ್ನು ತಮ್ಮ ಹೊಸ ಮನೆಯನ್ನು ಹರಸುವುದಕ್ಕೆ ಆಹ್ವಾನಿಸಿದ್ದರು.

ತಪೋನಗರದಲ್ಲಿ ಬಹಳಷ್ಟು ಮನೆಗಳು ನಿರ್ಮಾಣ ಹಂತದಲ್ಲಿರುವಾಗಲೇ, ತಪೋನಗರ ನಿವಾಸಿಗಳ ತಿಂಗಳ ಕೂಟದಲ್ಲಿ ಜನರು ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸುತ್ತಿರುವುದು ಕಂಡುಬರುತ್ತಿದೆ. ಈ ಸಮುದಾಯ ಮಹರ್ಷಿ ಅಮರರವರ ಒಂದು ಕನಸಾಗಿತ್ತು, ಅದನ್ನು ಗುರೂಜಿಯವರು ನನಸಾಗಿದ್ದಾರೆ. ತಪೋನಗರಿಗರು ಈ ಸ್ಥಳವನ್ನು ಎರಡನೇ ಶಂಬಲವಾಗಿ ರೂಪಿಸುವ ಜವಾಬ್ದಾರಿಯನ್ನು ಈಡೇರಿಸುವುದಕ್ಕಾಗಿ, ಎಲ್ಲ ಸೌಕರ್ಯಗಳನ್ನೂ ಮಾಡಲಾಗಿದೆ. ■

## ಲೈಟ್ ಚಾನಲ್ಸ್
### ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.comಗೆ ಬನ್ನಿ.

### ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

## ಗುರೂಜಿಯವರ ನುಡಿಗಳು

**(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)**

**(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)**

### 03–06–2012

ನನ್ನಿಂದ ದೂರ ವಾಸಿಸುವ ಜನರಿಗೆ ನಾನು ಹತ್ತಿರವೆನ್ನಿಸುತ್ತೇನೆ. ಅಲ್ಲಿ ಅಂತರವಿಲ್ಲ. ಆದರೆ ವಿಚಿತ್ರವೆಂದರೆ ತಪೋನಗರದಲ್ಲಿ ವಾಸಿಸುವ ಕೆಲವರು ಬಹುಶಃ ಈ ಸಾಮೀಪ್ಯ ಅನುಭವಿಸುವುದಿಲ್ಲ.

ಸ್ವಲ್ಪ ಪ್ರಯತ್ನದಿಂದ ಹೆಚ್ಚಿನದನ್ನು ಸಾಧಿಸಲು ಉತ್ತಮ ಅವಕಾಶಗಳಿರುವ ಕಾಲವಿದು. ಇಂತಹ ಸಮಯಗಳಲ್ಲಿ ನಾವು ಈ ಪ್ರಪಂಚದಿಂದ, ಜನಗಳಿಂದ ದೂರವಿರಬೇಕು, ಆದರೆ ಸಂಪೂರ್ಣವಾಗಿ ಕಡಿದುಕೊಳ್ಳಬಾರದು. ಅತಿಯಾಗಿ ಮಾತನಾಡುವುದು, ಹರಟೆ ಹೊಡೆಯುವುದನ್ನು ನಿಲ್ಲಿಸಿ, ಏಕೆಂದರೆ ಇದು ನಮ್ಮ ಚೈತನ್ಯ, ಸಮಯವನ್ನು ಉಳಿಸುತ್ತದೆ ಮತ್ತು ನಮಗೆ ಬೆಳವಣಿಗೆಯ ಕಡೆ ಗಮನವಿಡಲು ಅವಕಾಶವನ್ನು ಕೊಡುತ್ತದೆ.

ಬ್ರಹ್ಮಾಂಡದಲ್ಲಿ ಗ್ಯಾಲಕ್ಸಿಗಳ ನಡುವೆ ಇರುವ ಕಪ್ಪು ಆಕಾಶ, ಅವ್ಯಕ್ತ ಬ್ರಹ್ಮನಾಗಿದ್ದಾನೆ. ಮತ್ತೊಂದು ಸ್ವಾರಸ್ಯಕರ ವಿಷಯವಿದೆ. ಆನಂದಮಯಕೋಶದ ಸುತ್ತಲೂ ಒಂದು ಆಕಾಶವಿದೆ. ಇದು ಅವ್ಯಕ್ತ ಬ್ರಹ್ಮನ ಒಂದು ಭಾಗ. ಇದರಿಂದ ನಾವು ಹೆಚ್ಚಿನ ಚೈತನ್ಯ ಪಡೆಯಬಹುದು, ನಮಗೆ ಇದರ ಅರಿವಿರಬೇಕು. ಋಷಿಗಳು ಈ ಆಕಾಶವನ್ನು ಚಿದಾಕಾಶ ಎಂದು ಕರೆದಿದ್ದಾರೆ. ಮುಷ್ಟಿಗಾತ್ರದ ಅಕಾಶವನ್ನು ಅನುಭವಿಸಲು ಪ್ರಯತ್ನಿಸಿ. ಸದಾ ಸಮಚಿತ್ತರಾಗಿರಲು, ವಸ್ತುನಿಷ್ಠವಾಗಿ ವಿಷಯಗಳನ್ನು ನೋಡಲು, ಎಲ್ಲ ವಿಧದ ದ್ವಂದ್ವಗಳಿಂದ ಮತ್ತು ಅ–ಪ್ರೇಮದಿಂದ ಮೇಲೇರಲು ಇದು ಸಹಾಯ ಮಾಡುತ್ತದೆ. ಅತ್ಯಂತ ವಿವೇಕಯುಕ್ತವಾಗಿ ಪ್ರಪಂಚದಿಂದ ದೂರ ಉಳಿಯಲು ಮತ್ತು ಸಮಚಿತ್ತತೆಯಿಂದ ಸಂಬಂಧಗಳನ್ನು ನಿರ್ವಹಿಸಲು ಇದು ಸಹಾಯ ಮಾಡುತ್ತದೆ. ಇದನ್ನು ಪ್ರತಿದಿನ 3 ನಿಮಿಷಗಳವರೆಗೆ ಅಭ್ಯಾಸ ಮಾಡಿ. ಇದನ್ನು ಹೆಚ್ಚಿಗೆ ಅಭ್ಯಾಸ ಮಾಡಿದರೆ ಜೀವನದಲ್ಲಿ ಆಸಕ್ತಿ ಕಳೆದುಕೊಳ್ಳುವಿರಿ. ಇದರ ಬಗ್ಗೆ ಜಾಗರೂಕರಾಗಿರಿ.

ಒಂದು ಸಲ ನೀವು ಬದುಕಿನ ಮತ್ತು ಸಾಧನೆಯ ಹಾದಿಗಳನ್ನು ಆರಿಸಿಕೊಂಡರೆ, ಯಾವಾಗಲೂ ಪರೀಕ್ಷೆಗಳು, ಆಮಿಷಗಳು ಮತ್ತು ದಿಕ್ಕು ತಪ್ಪಿಸುವಿಕೆಗಳಿರುತ್ತವೆ. ನೀವು ಬದುಕಿನ ಹಾದಿಯನ್ನು ಆಯ್ಕೆ ಮಾಡಿದ ನಂತರ, ಇನ್ನೂ ಉತ್ತಮ ಹಾದಿಗೆ ಬದಲಾಯಿಸಿಕೊಳ್ಳಬಹುದು. ಆದರೆ ನೀವು ಹೆಚ್ಚಿನ ಸಮಯ ಮತ್ತು ಚೈತನ್ಯವನ್ನು ವ್ಯರ್ಥ ಮಾಡಬೇಕಾಗುತ್ತದೆ. ನೀವು ಅತ್ಯಂತ ಜಾಗರೂಕರಾಗಿರಿ.

ಕೇವಲ ನಮ್ಮನ್ನು ತಿದ್ದಲು ಮತ್ತು ಪರೀಕ್ಷಿಸಲು ನಕಾರಾತ್ಮಕತೆ ಇದೆ. ಅದು ನಮ್ಮ ಆತ್ಮಸಾಕ್ಷಿಯನ್ನು ಕೆಣಕುವುದಕ್ಕಾಗಿಯೇ ಇದೆ. ಆದರೆ ನಾವು ಅದಕ್ಕೆ ಬಲಿಯಾಗಬಾರದು. ಇದರ ಬಗ್ಗೆ ಚಿಂತನೆ ಮಾಡಿ. ಬಹುಶಃ ಇದು ದೇವರು ದ್ವಂದ್ವಗಳನ್ನು ಸೃಷ್ಟಿ ಮಾಡಲು ಕಾರಣವಿರಬಹುದು. ನಮ್ಮ ನಕಾರಾತ್ಮಕತೆಗಳನ್ನು ಅರಿತಿರಬೇಕು ಮತ್ತು ನಾವು ಆರಿಸಿದ ಮಾರ್ಗಗಳಿಗೆ ಬದ್ಧರಾಗಿರಬೇಕು.

ಸಾಧನೆಗಾಗಿ, ಕೆಲಸಕ್ಕಾಗಿ ನಿಮ್ಮನ್ನು ಸಂಪೂರ್ಣವಾಗಿ ಮೀಸಲಿಡುವುದು ಒಳ್ಳೆಯದು, ಆದರೆ ಈಗಿನ ಸಮಯದಲ್ಲಿ ಹಾಗೆ ಮಾಡುವುದು ಬೇಡ ಎನ್ನುವುದು ನನ್ನ ಸಲಹೆ. ಪ್ರಪಂಚ, ನಮ್ಮ ಪರೀಕ್ಷಾ ವಲಯ. ನಿಮ್ಮನ್ನು ನೀವು ಪ್ರತ್ಯೇಕಿಸಿಕೊಳ್ಳಬೇಡಿ. ನೀವು ಕೆಲಸ ಮಾಡುವ ಸ್ಥಳಗಳಲ್ಲಿ ಸಮಸ್ಯೆಗಳನ್ನು ಎದುರಿಸುವಾಗ ಮತ್ತು ಕಠಿಣ ಜನರ ಜೊತೆ ವಿಚಾರ ವಿನಿಮಯ ಮಾಡುವಾಗ ನಿಮಗೆ ಆಧ್ಯಾತ್ಮಿಕ ವಾಸ್ತವೀಯತೆಗಳ ಅರಿವು ಉಂಟಾಗುತ್ತದೆ. ನಿಮಗೆ ನಿಮ್ಮ ಶಕ್ತಿ ತಿಳಿಯುತ್ತದೆ ಮತ್ತು ಇನ್ನೂ ಶಕ್ತಿಯುತವಾಗಿ ಬೆಳೆಯುವಿರಿ.

ಒಬ್ಬರು ವಿಫಲರಾದರೆ, ಸೋಲು ಮತ್ತು ಹತಾಶೆಯನ್ನು ಅನುಭವಿಸುವುದು ಸಹಜ. ಬಹುಶಃ ಸೋಲುವುದು ಒಳ್ಳೆಯದು. ಅಲ್ಲಿ ಯಾವಾಗಲೂ ಒಂದು ಉತ್ತಮ ಅವಕಾಶಕ್ಕೆ ಬಾಗಿಲಿರುತ್ತದೆ ಮತ್ತು ನಾವು ತೆರೆಯದಿರುವ ಇನ್ನೂ ಅನೇಕ ಬಾಗಿಲುಗಳಿರುತ್ತವೆ.

ನೀವು ಟೇಬಲ್ ಜೋಡಿಸುವ ರೀತಿ, ನಿಮ್ಮ ಆಲೋಚನೆ ಮತ್ತು ಆದ್ಯತೆಗಳನ್ನು ವ್ಯವಸ್ಥೆಗೊಳಿಸುವ ರೀತಿ ಇಂತಹ ಸಣ್ಣಸಣ್ಣ ವಿವರಗಳಿಂದ ಆಧ್ಯಾತ್ಮಿಕತೆ ಮತ್ತು ಸಾಧನೆ ಪ್ರಾರಂಭವಾಗುತ್ತದೆ. ಶಂಬಲದ ನಿಯಮಗಳಲ್ಲಿ ಒಂದು ನಿಯಮ, ‘ನೀವು ಜೀವನವನ್ನು ಪ್ರೀತಿಸಬೇಕು’ ಎನ್ನುತ್ತದೆ. ಎಲ್ಲವನ್ನು ಒಂದು ಕ್ರಮದಲ್ಲಿಡಿ. ಪ್ರತಿಯೊಂದು ವಿವರಕ್ಕೂ ಪ್ರಾಮುಖ್ಯತೆ ಕೊಡಿ. ಅದಕ್ಕೆ ಪ್ರೀತಿಯನ್ನು ಸೇರಿಸಿ.

ಗ್ರಹಣಗಳು ಮಹತ್ತರ ಬದಲಾವಣೆಗಳನ್ನು ತರುತ್ತವೆ. ಇನ್ನು ಮುಂದೆ ನೀವು ನಿಮ್ಮ ಎಲ್ಲ ಕಾರ್ಯಗಳಿಗೆ ಜವಾಬ್ದಾರಿ ತೆಗೆದುಕೊಳ್ಳಬೇಕಾಗುತ್ತದೆ. ಪ್ರತಿಯೊಂದು ಕಾರ್ಯವನ್ನು ನೀವು ಪ್ರೀತಿಯಿಂದ ಮಾಡಿದರೆ ಅದು ಸರಿಯಾಗಿರುತ್ತದೆ. ನೀವು ತಪ್ಪು ಮಾಡಿದರೆ, ಕ್ಷಮಿಸಿ ಎಂದು ಹೇಳಿ. ಅಲ್ಲಿಗೆ ಮುಗಿಯುತ್ತದೆ. ನಾವು ಪ್ರೀತಿಯನ್ನು ಆಯ್ಕೆ ಮಾಡಿಕೊಳ್ಳೋಣ, ಅದನ್ನು ಅಭಿವ್ಯಕ್ತಗೊಳಿಸೋಣ, ಆಗ ನಮ್ಮಲ್ಲಿ ಯಾರಿಗೂ ಸಮಸ್ಯೆಗಳಿರುವುದಿಲ್ಲ.

### 10–06–2012

ನಾವು ‘ಆತ್ಮದ ಅವರೋಹಣ’ವನ್ನು ಇನ್ನೊಂದು ಉಪನಿಷತ್ ಎಂದು ಕರೆಯಬಹುದು. ನೀವು ಅದನ್ನು ಓದಿದರೆ ನಿಮ್ಮ ಅನೇಕ ಪ್ರಶ್ನೆಗಳಿಗೆ ಉತ್ತರಗಳು ಸಿಗುತ್ತವೆ; ಅನೇಕ ಪ್ರಶ್ನೆಗಳೂ ಉದ್ಭವಿಸುತ್ತವೆ. ನಿಮಗೆ ಯಾವ ಸಂದೇಹಗಳು ಇರುವುದಿಲ್ಲ.

2012 ರ ಕೊನೆಯ ಘಟನೆಗಳು, ವೈಯಕ್ತಿಕ ಮತ್ತು ವಿಶ್ವದ ಮಟ್ಟಗಳಲ್ಲಿ ಆಗುತ್ತಿರುವ ಪ್ರಕ್ಷುಬ್ಧತೆ, ವ್ಯವಸ್ಥೆಗಳ ಕುಸಿತ ಮತ್ತು ಎಷ್ಟೋ ಒಳ್ಳೆಯ ಘಟನೆಗಳು ಸಂಭವಿಸುತ್ತಿರುವುದು, ಒಂದು ಬೃಹತ್ ಪ್ರಕ್ರಿಯೆಯ ಭಾಗವಾಗಿದೆ ಎಂಬುವುದನ್ನು ನಾವು ಮನಗಾಣಬೇಕು. ಇವು ಮುಂದಿನ ಯುಗಕ್ಕೆ ನಮ್ಮನ್ನು ಕೊಂಡೊಯ್ಯುತ್ತವೆ. ನಮ್ಮೊಳಗಿನ ವ್ಯವಸ್ಥೆಯಲ್ಲಿ ಕುಸಿತಗಳುಂಟಾಗುತ್ತವೆ. ಇದನ್ನು ನಾವು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕು. ನಾವು ಕೆಲವು ಕುಸಿತಗಳನ್ನು ಸಂಭವಿಸಲು ಅನುಮತಿಸಬೇಕು. ನಾವು ಹೊಸಯುಗದ ಕಡೆಗೆ ಹೋಗುವುದನ್ನು ತಪ್ಪಿಸುವಂಥವುಗಳೆಲ್ಲವೂ ಕುಸಿಯಬೇಕು. ನಮ್ಮ ಅಹಂಕಾರಗಳು, ನಮ್ಮ ತಪ್ಪುಗ್ರಹಿಕೆಗಳು, ನಮ್ಮ ದುರಹಂಕಾರ, ಇನ್ನೂ ಎಷ್ಟೋ ವಿಷಯಗಳು ಅಥವಾ ಹೊರೆಗಳನ್ನು ಎಸೆಯಬೇಕು. ನಮಗೆ ತಪ್ಪುಗಳ ಮತ್ತು ದೊಡ್ಡ ಹೊರೆಯ ಅರಿವು ಆದಾಗ ಕೂಡಾ ಕುಸಿತಗಳಾಗುತ್ತವೆ. ಎಲ್ಲ ಬೆಳಕಿನ ಕಾರ್ಯಕರ್ತರ ಕೆಲಸಗಳೂ ಒಂದೇ ಕೆಲಸ ಮತ್ತು ಬೃಹತ್ ಪ್ರಕ್ರಿಯೆಯ ಒಂದು ಭಾಗ. ಬೆಳಕಿನ ಕಾರ್ಯಕರ್ತರು ಋಷಿಗಳೊಂದಿಗೆ ಸಂಪರ್ಕದಲ್ಲಿ ಇಲ್ಲದಿರಬಹುದು. ಆದರೂ ಪರವಾಗಿಲ್ಲ. ಎಲ್ಲ ಜ್ಞಾನವೂ ಋಷಿಗಳಿಂದಲೇ ಬರುತ್ತದೆ.

ಆತ್ಮದ ಮಟ್ಟದಿಂದ ಆಯ್ಕೆ ಮಾಡುವುದು ಬಹಳ ಮುಖ್ಯ. ಆಯ್ಕೆ ಮಾಡುವುದು ಒಂದು ರೀತಿಯ ನಿರಂತರ ಪ್ರಕ್ರಿಯೆ. ನಾವು ಸಂಪೂರ್ಣವಾಗಿ ಶರಣಾದರೆ, ನಮ್ಮ ಆಯ್ಕೆ ಮಾಡಿಕೊಂಡಿರುವುದು ಖಚಿತವಾಗುತ್ತದೆ.

ಈ ಸಂದರ್ಭದಲ್ಲಿ ಶರಣಾಗುವಿಕೆ ಮತ್ತು ಒಪ್ಪಿಗೆ ಬಹಳ ಮುಖ್ಯವಾದ ಅಂಶಗಳು ಮತ್ತು ಅವನ್ನು ಅನುಸರಿಸುವುದು ಬಹಳ ಕಷ್ಟ. ಈ ಜೋಡಿ ಗ್ರಹಣಗಳಿಂದ ಮುಂದೆ ಮತ್ತು ನವೆಂಬರ್‌ನಲ್ಲಿ ಆಗಲಿರುವ ಜೋಡಿ ಗ್ರಹಣಗಳವರೆಗೆ ನಾವು ಅಲ್ಪ ಪ್ರಯತ್ನದಿಂದ ಅದ್ಭುತ ಫಲಿತಾಂಶಗಳನ್ನು ಸಾಧಿಸಬಹುದು. ನಮಗೆ ತಿಳಿದಿರುವ ಮತ್ತು ತಿಳಿಯದಿರುವ ವಿಶೇಷ ಚೈತನ್ಯಗಳು ನಮಗೆ ಸಹಾಯ ಮಾಡುತ್ತವೆ. ಇನ್ನು ಮುಂದೆ ವೈಯಕ್ತಿಕ ಮಟ್ಟದಲ್ಲಿ ನಮಗೆ ಅನೇಕ ಸಮಸ್ಯೆಗಳು, ಪರೀಕ್ಷೆಗಳು ಮತ್ತು ಪ್ರಕ್ಷುಬ್ಧತೆಗಳು ತಲೆದೋರುತ್ತವೆ. ನೀವು ಕಣ್ಣುಮುಚ್ಚಿ ನಮ್ಮನ್ನು ಅನುಸರಿಸಿದರೆ, ನೀವು ಆಧ್ಯಾತ್ಮಿಕ ಉನ್ನತಿಯನ್ನು ಸಾಧಿಸುವಿರಿ ಎಂಬುದಕ್ಕೆ ನಾನು ಭರವಸೆ ನೀಡುತ್ತೇನೆ.

ನಾವು ಯಾವುದೇ ಹಂತದಲ್ಲಿದ್ದರೂ ಅಲ್ಲಿಂದ ಮೇಲೇರಿ ಅತ್ಯುನ್ನತ ಹಂತವನ್ನು ತಲುಪುವ ಸಮಯ ಬಂದಿದೆ. ಕಾಲ ನಮಗೆ ಅದ್ಭುತ ಅವಕಾಶಗಳನ್ನು, ಚೈತನ್ಯಗಳನ್ನು, ಸಲಹೆಗಳನ್ನು, ಜ್ಞಾನಗಳನ್ನು ನೀಡುತ್ತಿರುವಾಗ ದೈವತ್ವದ ಅನುಭವವನ್ನು ಏಕೆ ಕಳೆದುಕೊಳ್ಳಬೇಕು? ನಾವು ಪ್ರಯತ್ನಗಳನ್ನು ಮಾಡಬೇಕು.

ನಾವು ಮುಕ್ತಿಯನ್ನು ಪಡೆದೇ ತೀರುತ್ತೇವೆ, ಆದರೆ ನಾವು ಇಲ್ಲಿ ಒಂದು ನಿರ್ದಿಷ್ಟ ಉದ್ದೇಶದಿಂದ ಕೆಳಗಿಳಿದು ಬಂದಿದ್ದೇವೆ, ದೇವರ ಪ್ರೀತಿಯನ್ನು ಹೊಂದಿರುವ ಜೀವ–ಶಕ್ತಿಯನ್ನು ಅನುಭವಿಸಲು ಮತ್ತು ಅಭಿವ್ಯಕ್ತಿಸಲು ಬಂದಿದ್ದೇವೆ. ಅದನ್ನು ಸುತ್ತ ಹರಡುವುದು ಒಂದು ಭವ್ಯವಾದ ಮತ್ತು ತೃಪ್ತಿಕರವಾದ ಕೆಲಸ.

## ಗುರೂಜಿಯವರ ನುಡಿಗಳು

(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)

(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)

ನಾನು ವೇಗದ ಬರವಣಿಗೆಯ ಬಗ್ಗೆ ಒಂದು ಒಳ್ಳೆಯ ಲೇಖನ ಓದುತ್ತಿದ್ದೆ. ನೀವು ವೇಗದ ಬರವಣಿಗೆಯನ್ನು ಅಭ್ಯಸಿಸಲು ಪ್ರಾರಂಭಿಸಿದಾಗ ಮಹಾತ್ಮ ಗಾಂಧಿ ಎಂದು ಹೇಳಿಕೊಂಡು ನಿಮ್ಮ ಮೂಲಕ ಒಂದು ಆತ್ಮ ಬರೆಯುವ ಅಪಾಯವಿದೆ! ಋಷಿಗಳು, ಮಹಾಗುರುಗಳು ಇಂಥ ಕಾರಣಗಳಿಗೆ ಅಥವಾ ಒಳ್ಳೆಯ ಕಾರಣಗಳಿಗೆ ಕೂಡಾ ಬೇರೆಯವರ ದೇಹಗಳನ್ನು ಬಳಸುವುದಿಲ್ಲ.

ದೇವರ ನಂತರ ಸಪ್ತಋಷಿಗಳು. ಇದು ಪರಂಪರೆ. ಆದ್ದರಿಂದಲೇ ಅವರಿಂದ ಬರುವ ಜ್ಞಾನ ಸಂಪೂರ್ಣ ಮತ್ತು ಅಧಿಕೃತ. ನಾವು ನೇರವಾಗಿ ಸಪ್ತಋಷಿಗಳ ಮಾರ್ಗದರ್ಶನದಲ್ಲಿ ಇರುವುದು ನಮ್ಮ ಅದೃಷ್ಟ. ನಾವು ಪಡೆದುಕೊಂಡ ಜ್ಞಾನವೆಲ್ಲವನ್ನು ಬೇರೆಯವರಿಗೆ ರವಾನಿಸುತ್ತೇವೆ, ಅವರು ಅದನ್ನು ಒಪ್ಪಬಹುದು ಅಥವಾ ಒಪ್ಪದಿರಬಹುದು.

ಐದು ಸಾವಿರ ವರ್ಷಗಳ ಹಿಂದೆ, ಕಲಿಯುಗ ಪ್ರಾರಂಭವಾದಾಗ ಅನೇಕ ಜನ ಈ ಭೂಮಿಯನ್ನು ಬಿಟ್ಟು, ಬೇರೆ ಭೂಮಿಗಳಿಗೆ ಹೋಗಿ ನೆಲೆಸಿದರು. 2012ರ ನಂತರ ಅವರು ಈ ಭೂಮಿಗೆ ಮತ್ತೆ ಹಿಂದಿರುಗಿ ಬರುತ್ತಾರೆ.

17–06–2012

ಒಬ್ಬ ವ್ಯಕ್ತಿ ಹೇಳಿದರು, 'ನಾನು ಒಬ್ಬ ಸೆರೆಯಾಳಿನಂತೆ ಎಂದು ಭಾಸವಾಗುತ್ತಿದೆ. ನನಗೆ ಸ್ವಾತಂತ್ರ್ಯ ಬೇಕು.' ನನಗೆ ಆಶ್ಚರ್ಯವಾಯಿತು. ಯಾರು ಸೆರೆಯಾಳಲ್ಲ? ನಾವು ನಮ್ಮದೇ ಆದ ಗೋಪುರಗಳನ್ನು, ಸೆರೆಮನೆಗಳನ್ನು ಕಟ್ಟಿಕೊಳ್ಳುತ್ತೇವೆ! ನಾವು ಆಧ್ಯಾತ್ಮಿಕ ಸಾಧನೆಯನ್ನು ಈ ಸೆರೆಮನೆಗಳಿಂದ ಹೊರಬರಲು ಕೈಗೊಂಡಿದ್ದೇವೆ. ಸಾಧನೆಯ ಗುರಿ ಎಂದರೆ ಎಲ್ಲ ಹಂತಗಳಲ್ಲಿ ಸ್ವಾತಂತ್ರ್ಯವನ್ನು ಪಡೆಯುವುದು.

ಸಂಪರ್ಕ ಸಾಧನೆಗಳು ವಿಫಲಗೊಂಡಾಗ ಮತ್ತು ನಮ್ಮ ಟೆಲಿಪತಿ ಹಾಗೂ ಇತರ ಮನೋಸಾಮರ್ಥ್ಯಗಳು ಬೆಳೆಯದೇ ಹೋದರೆ, ಆಗ ನೀವು ನನ್ನೊಡನೆ ಆತ್ಮದ ಮಟ್ಟದಲ್ಲಿ ಸಂಪರ್ಕಿಸಲು ಪ್ರಾರಂಭಿಸಬಹುದು. ಅದನ್ನು ಈಗಲೇ ಪ್ರಾರಂಭಿಸಬಹುದು. ಮೊದಲ ಬಾರಿಗೆ, ಬಹುಶಃ ಸಾವಿರದ ಸಲ ಕೂಡಾ ನೀವು ಯಶಸ್ವಿಯಾಗದಿರಬಹುದು, ಆದರೆ ನೀವು ಪ್ರಯತ್ನ ಮಾತ್ರ ಬಿಡಬಾರದು. ಸಾಧನೆ ಒಂದು ಪ್ರಯತ್ನ, ಕೊನೆಯಿಲ್ಲದ ಪ್ರಯತ್ನ, ತಾಳ್ಮೆಯ ಪ್ರಯತ್ನ. ನಿಮ್ಮನ್ನು ನೀವು ಒಂದು ಬೆಳಕಿನ ಬಿಂದು ಮತ್ತು ನನ್ನನ್ನು ಇನ್ನೊಂದು ಬೆಳಕಿನ ಬಿಂದು ಎಂದು ಊಹಿಸಿಕೊಳ್ಳಿ. ಒಂದು ಬೆಳಕಿನ ದಪ್ಪ ಕಿರಣ ಈ ಎರಡು ಬೆಳಕಿನ ಬಿಂದುಗಳನ್ನು ಸಂಪರ್ಕಿಸುತ್ತಿದೆ ಎಂದು ಊಹಿಸಿಕೊಳ್ಳಿ, ನಂತರ ಸಂಪರ್ಕಿಸಲು ಪ್ರಾರಂಭಿಸಿ. ಮಾತನಾಡಿ ಮತ್ತು ಆಲಿಸಿ. ಆಗ ಸಂಪರ್ಕ ಲಭಿಸುತ್ತದೆ. ಅದು ಪರಿಶುದ್ಧ, ನೇರ ಮತ್ತು ವಿಕೃತಗೊಂಡಿರದ ಸಂಪರ್ಕ.

ದೇವರನ್ನು ಪರಮೋನ್ನತ ಬುದ್ಧಿಶಕ್ತಿ, ಸೃಷ್ಟಿಯ ಮತ್ತು ಎಲ್ಲ ಜೀವನದ ಹಿಂದೆ ಇರುವ ಪರಮೋನ್ನತ ಶಕ್ತಿ ಎಂದು ನಾವು ತಿಳಿದಿದ್ದೇವೆ. ನಿಮ್ಮ ಸ್ವಂತ ಅನುಭವ ಮತ್ತು ನಿಮ್ಮದೇ ಸ್ವಂತ ಅರ್ಥವಂತಿಕೆಯಿಂದ ಈ ಸತ್ಯಗಳನ್ನು ಮನಗಾಣಬೇಕು.

ಇತ್ತೀಚೆಗೆ ಒಬ್ಬ ವ್ಯಕ್ತಿ ಒಂದು ಮೇಲ್ ಬರೆದು ತಮಗೆ ಬೇಕೆನಿಸಿದಂತೆ ನನ್ನಿಂದ ಮಾರ್ಗದರ್ಶನ ಸಿಗಲಿಲ್ಲ, ನಿರಾಸೆಯಾಯಿತೆಂದು ತಿಳಿಸಿದರು. ಒಬ್ಬ ಗುರು, ಆಧ್ಯಾತ್ಮಿಕ ಮಾರ್ಗದರ್ಶಕ. ಅವರು ನಿಮ್ಮ ಆಧ್ಯಾತ್ಮಿಕ ಪ್ರಯಾಣದಲ್ಲಿ ಮಾರ್ಗದರ್ಶಿಸುತ್ತಾರೆ. ಅವರು ಜ್ಞಾನ, ತಂತ್ರಗಳು, ಚೈತನ್ಯಗಳು, ಪ್ರೋತ್ಸಾಹ ನೀಡುತ್ತಾರೆ. ಹಾಗೆಯೇ ಬೈದು ತಿಳಿಹೇಳುತ್ತಾರೆ ಕೂಡಾ. ಸಾಧನೆಯಲ್ಲಿ ಗಳಿಸಿದ ವಿವೇಕವನ್ನು ಜೀವನ ನಡೆಸುವಾಗ ಉಪಯೋಗಿಸಬೇಕು. ಒಬ್ಬ ಗುರು ಏನು ಮಾಡಬೇಕು, ಏನು ಮಾಡಬಾರದು ಎಂಬುದು ನನಗೆ ತಿಳಿದಿದೆ, ಏಕೆಂದರೆ ನಾನು ನನ್ನ ಗುರುಗಳಾದ ಮಹಾನ್ ಗುರು ಅಮರರಿಂದ ಕಲಿತಿದ್ದೇನೆ. ಪ್ರತಿಯೊಬ್ಬರೂ ಒಬ್ಬ ಋಷಿಯಾಗಬೇಕು, ಅಂಗವಿಕಲನಾಗಬಾರದು ಎಂಬುದು ಋಷಿಗಳ ಬಯಕೆ ಎಂದು ಅಮರರವರು ಹೇಳಿದ್ದಾರೆ. ನೀವು ನಿರ್ಧಾರಗಳನ್ನು ಕೈಗೊಳ್ಳಬೇಕು, ತಪ್ಪು ನಿರ್ಧಾರಗಳನ್ನು ಕೂಡಾ, ಆದರೆ ಕೈಗೊಂಡ ನಿರ್ಧಾರಗಳಿಗೆ ನೀವೇ ಜವಾಬ್ದಾರರಾಗಬೇಕು. ಪ್ರತಿಯೊಬ್ಬರಿಗೂ ಜ್ಞಾನೋದಯವಾಗುವಂತೆ ಋಷಿಗಳು ಕೆಲಸ ಮಾಡುತ್ತಿದ್ದಾರೆ.

ಜೂನ್ 20ರಿಂದ ಪ್ರಾರಂಭವಾಗುವ ಆಷಾಢ ಮಾಸದಲ್ಲಿ ಪರಬ್ರಹ್ಮ ಲೋಕದಿಂದ ನೇರವಾಗಿ ಅತ್ಯುನ್ನತ, ಪರಿಶುದ್ಧ ಚೈತನ್ಯಗಳನ್ನು ಪಡೆಯುವುದರಿಂದ ಪ್ರತಿಯೊಂದು ಕ್ಷಣವೂ ಮಂಗಳಕರ.

24–06–2012

ಒಬ್ಬ ವ್ಯಕ್ತಿ ನನಗೆ ಪತ್ರ ಬರೆದು, ಯಾವುದೇ ಸಂದರ್ಭದಲ್ಲಿ ಆಕೆ ನನ್ನನ್ನು ನಿರಾಶೆಗೊಳಿಸುವುದಿಲ್ಲ ಎಂದು ತಿಳಿಸಿದರು. ನಾನು ಆ ಮಾತಿನ ಬದ್ಧತೆಯಲ್ಲಿರುವ ಗಾಢತೆಯನ್ನು ಅನುಭವಿಸಬಲ್ಲೆ. ನಾನು ಹಿಂತಿರುಗಿ ಪತ್ರ ಬರೆದೆ: "ನೀವು ನನ್ನನ್ನು ಎಂದಿಗೂ ನಿರಾಶೆಗೊಳಿಸುವುದಿಲ್ಲ." ನೀವು ನನ್ನೊಂದಿಗೆ ಮಾತ್ರವಲ್ಲ, ಯಾರೊಂದಿಗಾದರೂ ಕೋಪಗೊಂಡಾಗ, ನಾನು ನಿರಾಶೆಗೊಳ್ಳುತ್ತೇನೆ. ನಾನು ಒಬ್ಬ ಗುರು, ನೀವು ಬೆಳೆದಾಗ ನನಗೆ ಸಂತೋಷವಾಗುತ್ತದೆ. ನಿಮ್ಮ ನಡತೆ ಸರಿಯಿಲ್ಲ ಎಂದಾಗ ನನ್ನನ್ನು ನಿರಾಶೆಗೊಳಿಸಿದಿರಿ ಎಂದು ತಿಳಿಯುತ್ತೇನೆ.

ಈ ಭೂಮಿಯ ಮೇಲೆ ಅನೇಕ ಜನ ಹೀಲರ್‌ಗಳು ಇದ್ದಾರೆ. ನಾವು ಕೆಲವು ಸತ್ಯಗಳನ್ನು ಅರಿಯಬೇಕಿದೆ. ಬಹುಶಃ ಹೀಲಿಂಗ್ ಒಂದು ಶ್ರೇಷ್ಠ ಕಾರ್ಯ. ಹೀಲಿಂಗ್ ಚೈತನ್ಯಗಳನ್ನು ಕಳುಹಿಸುವುದರಿಂದ ಸಾವನ್ನು ತಪ್ಪಿಸುವುದು ಸಾಧ್ಯವಿಲ್ಲ ಮತ್ತು ಒಬ್ಬ ವ್ಯಕ್ತಿಯ ಕಾಯಿಲೆಯನ್ನು ವಾಸಿ ಮಾಡುವ ಖಾತರಿ ಇಲ್ಲ. ಇದರ ಅರ್ಥ ಹೀಲಿಂಗ್ ಪರಿಣಾಮಕಾರಿಯಲ್ಲ ಅಥವಾ ನಾವು ಅಸಮರ್ಥರು ಎಂದಲ್ಲ. ಇಲ್ಲಿ ಬೇರೆ ವಾಸ್ತವೀಯತೆಗಳಿವೆ. ಹೀಲಿಂಗ್ ಚೈತನ್ಯಗಳು ಯಾವಾಗಲೂ ಸಹಾಯ ಮಾಡುತ್ತವೆ. ಸಾವನ್ನು ತಪ್ಪಿಸುವುದಿಲ್ಲವಾದರೂ ಅದು ನೆಮ್ಮದಿ, ಭರವಸೆಗಳನ್ನು ನೀಡುತ್ತವೆ. ಹೀಲಿಂಗ್‌ನಲ್ಲಿ ವಿಶ್ವಾಸವನ್ನು ಕಳೆದುಕೊಳ್ಳಬೇಡಿ, ಅದು ಕೆಲಸ ಮಾಡುತ್ತದೆ. ಹೀಲಿಂಗ್‌ನಲ್ಲಿ ದೊಡ್ಡ ಉದ್ದೇಶವಿದೆ. ಅದು, ವ್ಯಕ್ತಿಯನ್ನು ಉನ್ನತ ಮಟ್ಟಕ್ಕೇರಿಸಲು, ಅವನು ತನ್ನನ್ನು ತಾನು ಆಧ್ಯಾತ್ಮೀಕರಿಸಿಕೊಳ್ಳಲು ಕೆಲಸ ಮಾಡುತ್ತದೆ. ಒಬ್ಬ ವ್ಯಕ್ತಿ ಈ ಆಯ್ಕೆಯನ್ನು ತಿರಸ್ಕರಿಸಿದರೆ ಹೀಲಿಂಗ್ ಸಹಾಯ ಮಾಡುವುದಿಲ್ಲ. ವ್ಯಕ್ತಿ ಕಷ್ಟಪಡುತ್ತಾನೆ. ಧ್ಯಾನಗಳೂ ಕಡ್ಡಾಯವಲ್ಲ ಅಥವಾ ಮುಖ್ಯವಲ್ಲ ಆದರೆ, ಆಧ್ಯಾತ್ಮೀಕರಣ ಮುಖ್ಯ.

ದೇವರು ನಮಗೆ ಕಾಣಿಕೆಗಳನ್ನು ಕೊಡುತ್ತಾನೆ. ನಾವು ಅವುಗಳನ್ನು ಗಳಿಸಿದ್ದೇವೆಂದು ತಿಳಿಯುತ್ತೇವೆ. ದೇವರು ಇಚ್ಛಿಸದ ಹೊರತು ನಮಗೆ ಕಾಣಿಕೆಗಳು ಸಿಗುವುದಿಲ್ಲ ಎಂಬುದನ್ನು ಮರೆಯಬಾರದು. ನಿಮಗೆ ಕೆಲವು ಕಾಯಿಲೆಗಳಿರಬಹುದು. ದೇವರು ನರಳುವುದರಿಂದ ತಪ್ಪಿಸಬಹುದು, ಏಕೆಂದರೆ ನೀವೊಬ್ಬ ಧ್ಯಾನಿ. ನಮ್ಮಲ್ಲಿ ಅನೇಕರು ನಾನಾ ಕಾಣಿಕೆ ಪಡೆದಿದ್ದೇವೆ, ಅದಕ್ಕೆ ಕೃತಜ್ಞತೆಗಳನ್ನು ವ್ಯಕ್ತಪಡಿಸುವುದಿರಲಿ ಅದನ್ನು ಗುರುತಿಸಿಕೊಳ್ಳುವುದೂ ಇಲ್ಲ. ಪ್ರತಿಯೊಂದು ಶಾಂತಿಯುತ ಕ್ಷಣ ದೇವರ ಕಾಣಿಕೆ ಎಂದು ತಿಳಿಯಿರಿ. ಮೊದಲು ನಾವು ಗುರುತಿಸಬೇಕು, ನಂತರ ನಾವು ಅಸ್ತವ್ಯಸ್ತಗೊಳಿಸಬಾರದು. ತೃಪ್ತಿ ಎನ್ನುವುದು ನಾವು ಎಳೆಯುವ ಗೆರೆ. ಆದ್ದರಿಂದ ನಾವು ಧ್ಯಾನಗಳನ್ನು ಕೈಗೊಂಡರೂ, ಸಮಸ್ಯೆಗಳಿದ್ದರೆ ನಮ್ಮನ್ನು ನಾವೇ ದೂಷಿಸಿಕೊಳ್ಳಬೇಕಾಗುತ್ತದೆ. ಅದು ಕೂಡಾ ಸಹಾಯ ಮಾಡದು. ನಾವೇ ತಿದ್ದಿಕೊಳ್ಳಬೇಕು, ನಮ್ಮ ಅಹಂ ಅನ್ನು ದೂರವಿಟ್ಟು ಸಂತೋಷವಾಗಿರಬೇಕು.

ಒಬ್ಬ ವ್ಯಕ್ತಿ ಪ್ರತಿನಿತ್ಯ ಕ್ರಮಬದ್ಧವಾಗಿ ಧ್ಯಾನಿಸುತ್ತಿದ್ದರೆ ಮಾಟ ಮಂತ್ರಗಳು ಏನೂ ಮಾಡುವುದಿಲ್ಲ; ಭಯಭೀತರಾಗಬೇಡಿ. ನನ್ನ ಮಾತುಗಳಲ್ಲಿ ವಿಶ್ವಾಸವಿಡಿ; ನಿಮ್ಮ ಧ್ಯಾನಗಳಲ್ಲಿ ವಿಶ್ವಾಸವಿಡಿ. ನಿಮ್ಮನ್ನು ಯಾವುದೂ ತಟ್ಟುವುದಿಲ್ಲ.

ನಮ್ಮ ಬಾಳಿನ ಉದ್ದೇಶ ಆಧ್ಯಾತ್ಮಿಕವಾಗಿ ಬೆಳೆಯುವುದು, ಋಷಿಗಳಿಗೆ ಸಹಾಯಕರಾಗಿರುವುದು. ಆಗ ನಾವು ಬೇರೆ ಕಾರ್ಯಗಳನ್ನು ಕೈಗೊಳ್ಳುವುದಿಲ್ಲ. ನಾವು ಜನಗಳೊಂದಿಗೆ ಘರ್ಷಣೆಗೆ ತೊಡಗುವುದಿಲ್ಲ. ಈಗ ಅಂತರ್ಜಾಲದ ಮೂಲಕ ಬೆಳಕಿನಿಂದ ಕ್ರಾಂತಿಯನ್ನು ಹರಡುವುದರ ಮೇಲೆ ನಮ್ಮ ಗಮನವಿದೆ. ನಮ್ಮ ಮಟ್ಟದಿಂದ ನಾವು ಪ್ರಯತ್ನಿಸುತ್ತಿದ್ದೇವೆ. ಅಂತರ್ಜಾಲದ ಹೆಚ್ಚಿನ ಚಾನಲ್‌ಗಳಲ್ಲಿ ಇದು ದೊರೆಯುವಂತೆ ಮಾಡುವುದು ನಮ್ಮ ಉದ್ದೇಶ. ನಿಮ್ಮದೇ ಆದ ರೀತಿಯಲ್ಲಿ ಅದನ್ನು ಮಾಡಿ. ನೀವು ಕೆಲಸವನ್ನು ಮಾಡಲು ಪ್ರಾರಂಭಿಸುವ ಮೊದಲು ನಮ್ಮ ಸಲಹೆ ಮತ್ತು ಮಾರ್ಗದರ್ಶನ ಪಡೆಯಿರಿ. ನೀವಿರುವ ಸ್ಥಳಗಳಿಂದಲೇ ಈ ಕೆಲಸ ಮಾಡಬಹುದು. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 2000/–), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1000/–) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫೀನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ಎಲ್ಲಾ ಪ್ರಶ್ನೆಗಳಿಗೆ ಮತ್ತು ಸಂದೇಹಗಳಿಗೆ ಗುರೂಜಿಯವರೇ ಉತ್ತರಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಅಮರ

**ಶ್ಯಾಮಲಾದೇವಿ; ಅನು: ಸುಧಾಕರ್**

ಅಮರರವರು ಕೇವಲ ಒಂಭತ್ತು ವರ್ಷದವರಿದ್ದಾಗ ಸೂರ್ಯ ಲೋಕಕ್ಕೆ ತಮ್ಮ ಮೊದಲ ಪ್ರಯಾಣ ಮಾಡಿದರು. ಸ್ವತಃ ವಿಶ್ವಾಮಿತ್ರ ಮಹರ್ಷಿಗಳೇ ಅವರಿಗೆ ಯೋಗ ಮತ್ತು ಆಧ್ಯಾತ್ಮಿಕತೆಯ ಸಂಪೂರ್ಣ ವಿಜ್ಞಾನವನ್ನು ಹೇಳಿಕೊಟ್ಟರು ಮತ್ತು ತರಬೇತಿ ನೀಡಿದರು. ಅಮರರವರು ಅದೆಲ್ಲದರಲ್ಲೂ ಪಾಂಡಿತ್ಯ ಪಡೆದರು ಮತ್ತು ತಮ್ಮ ಹನ್ನೆರಡನೇ ವಯಸ್ಸಿನಲ್ಲಿ ಋಷಿ–ಕಾರ್ಯಕರ್ತರಾದರು. ಅಂದಿನಿಂದ ತಮ್ಮ ಅಂತ್ಯದವರೆಗೂ ಅವರು ವಿವಿಧ ಮಟ್ಟಗಳಲ್ಲಿ ಸಪ್ತ ಋಷಿಗಳಿಗಾಗಿ ಕೆಲಸ ಮಾಡಿದರು.

ಅವರು ಮಾಡಿದ ಆಸ್ಟ್ರಲ್ ಕೆಲಸವೊಂದಕ್ಕೆ ಸಮುದ್ರ ದೇವತೆ ಮೆಚ್ಚುಗೆ ಸೂಚಿಸಿ, ಅವರಿಗೆ ನೀಡಿದ ಶಕ್ತಿ–ದಂಡವನ್ನು ಅವರು, ಈ ಭೂಮಿಯ ಉಸ್ತುವಾರಿ ಹೊತ್ತಿದ್ದ ಮಾರ್ಕಂಡೇಯ ಮಹರ್ಷಿಗಳಿಗೆ ಒಪ್ಪಿಸಿದರು. ಮಹರ್ಷಿಗಳು, 'ಅದು ನಿಮಗೆ ಉಡುಗೊರೆಯಾಗಿ ಕೊಟ್ಟಿರುವುದರಿಂದ ನೀವೇ ಇಟ್ಟುಕೊಳ್ಳಿ' ಎಂದಾಗ, ಅಮರರವರು, 'ಅದು ನಿಮ್ಮ ಬಳಿಯೇ ಇರಬೇಕು' ಎಂದರು. ಅಮರರವರು ತತ್ವನಿಷ್ಠೆ, ಅರ್ಪಣೆ ಮತ್ತು ಶರಣಾಗತಿಯ ಪ್ರತೀಕವಾಗಿದ್ದರು.

ಒಮ್ಮೆ ಗುರೂಜಿಯವರು ಅಮರರವರಿಗೆ, "ನೀವು ತುಂಬ ವಿಶೇಷ ವ್ಯಕ್ತಿಯಾಗಿರಬೇಕು" ಎಂದು ಹೇಳಿದಾಗ, ಅವರು "ಪ್ರತಿಯೊಬ್ಬರೂ ವಿಶೇಷ ವ್ಯಕ್ತಿಗಳೇ. ಇಲ್ಲದಿದ್ದರೆ ನಾವು ಋಷಿಗಳೊಂದಿಗೆ ಕೆಲಸ ಮಾಡಲಾಗುವುದಿಲ್ಲ" ಎಂದು ಹೇಳಿದರು. ಅವರು ಬಹುದೊಡ್ಡ ಮಹರ್ಷಿಗಳಾಗಿದ್ದರೂ, ತಮ್ಮನ್ನೆಂದೂ ಋಷಿ ಎಂದು ಹೇಳಿಕೊಳ್ಳಲಿಲ್ಲ. ಜೀವನದುದ್ದಕ್ಕೂ ಅಮರರವರು ವಿನಯವೇ ಮೈವೆತ್ತಿದಂತಿದ್ದರು.

ಗಾಂಭೀರ್ಯ ಮತ್ತು ಶಕ್ತಿಯ ಸಾಕಾರರೂಪವಾಗಿದ್ದ ಅಮರರವರು, 1982ರಲ್ಲಿ ತೀವ್ರ ಅಸ್ವಸ್ಥರಾಗಿ, ಕ್ಷೌರ ಕೂಡ ಮಾಡಿಕೊಳ್ಳಲಾಗದೆ ಹಾಸಿಗೆಯಲ್ಲಿ ಮಲಗಿದ್ದರು. ಆ ಸ್ಥಿತಿಯಲ್ಲಿ ಅಮರರವರನ್ನು ಕಂಡ ಗುರೂಜಿಯವರು, ಕಂಪಿಸುವ ಹೃದಯದೊಂದಿಗೆ ಒಂದು ಪ್ರಶ್ನೆ ಕೇಳಿದರು. ಅದಕ್ಕೆ ಅಮರರವರು ಉತ್ತರ ನೀಡಲಿಲ್ಲ, ಪ್ರತಿಯಾಗಿ ಕಣ್ಣೀರು ಹರಿಯುತ್ತಿತ್ತು. ಅವರಿಗೂ ಮನುಷ್ಯರಿಗಿರುವ ಭಾವನೆಗಳಿದ್ದವು.

ಒಮ್ಮೆ ಗುರೂಜಿಯವರು ದಿನದ ಕೆಲಸಗಳ ಶ್ರಮದಿಂದಾಗಿ ಆಯಾಸಗೊಂಡು, ನಿದ್ರೆಗೆ ಜಾರಿದ್ದರು. ಆಗ ಅಮರರವರು ಸೂಕ್ಷ್ಮ ದೇಹದಲ್ಲಿ ಬಂದು ಗುರೂಜಿಯವರ ಆಯಾಸ ನಿವಾರಣೆ ಮಾಡಿದರು. ಅಂಥ ಪ್ರೀತಿಯನ್ನು ಅವರು ಗುರೂಜಿಯವರಿಗಾಗಿ ಮತ್ತು ಎಲ್ಲರಿಗಾಗಿ ಹೊಂದಿದ್ದರು. ಈಗ ನಮ್ಮ ಮಧ್ಯದಲ್ಲಿ ಇಲ್ಲದಿದ್ದರೂ, ಅವರು ಪ್ರೀತಿಯಾಗಿ ಉಳಿದಿದ್ದಾರೆ. ■

## ಅಮರ

**ಶೋಭಾ ಕೆ ರಾವ್; ಅನು: ಸುಧಾಕರ್**

ಒಬ್ಬ ಮಹಾನ್ ಋಷಿಯಿಂದ ಎರಡೂವರೆ ವರ್ಷಗಳ ತರಬೇತಿ ಪಡೆದ ನಂತರ ಅಮರರವರಿಗೆ ಹನ್ನೆರಡು ವರ್ಷಗಳಾಗಿದ್ದಾಗ ಅವರನ್ನು ಋಷಿ ಎಂದು ಘೋಷಿಸಲಾಯಿತು. ಆ ಋಷಿ ಅಮರರವರಿಗೆ ಧ್ಯಾನ ಮತ್ತು ಆಧ್ಯಾತ್ಮಿಕ ವಿಜ್ಞಾನಕ್ಕೆ ಸಂಬಂಧಿಸಿದ ಎಲ್ಲ ಜ್ಞಾನವನ್ನೂ ತಿಳಿಸಿಕೊಟ್ಟರು.

ಮನುಕುಲದ ಒಳಿತಿಗಾಗಿ ಮತ್ತು ಬಹುತೇಕ ಸೂಕ್ಷ್ಮ ಮಟ್ಟಗಳಲ್ಲಿ ಮಾಡಿದ ಅಮರರವರ ಕೆಲಸಗಳು ಅತ್ಯುತ್ತಮವಾಗಿದ್ದವು. 'ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು' ಪುಸ್ತಕವನ್ನು ಓದುವುದು ನಿಜವಾಗಿಯೂ ಒಂದು ಅದ್ಭುತ ಅನುಭವ. ಅದು ಅಮರರವರ ಉದಾತ್ತತೆ, ತಾಳ್ಮೆ, ವಿನಯ, ಮತ್ತು ಋಷಿಗಳ ಕೆಲಸದ ಬಗೆಗಿನ ಬದ್ಧತೆಗಳ ಬಗ್ಗೆ ವಿಸ್ತಾರವಾಗಿ ತಿಳಿಸುತ್ತದೆ.

ಗುರೂಜಿಯವರು ನಮ್ಮ ಜೀವನಕ್ಕೆ ಅಮರರವರನ್ನು ತಂದರು; ಅವರೊಂದಿಗೆ ಋಷಿಗಳೂ ಬಂದರು. ಇಲ್ಲಿನ ಜೀವನವನ್ನು ಅನುಭವಿಸಲು ನಮ್ಮನ್ನು ಈ ಭೂಮಿಗೆ ಕರೆತಂದ ಋಷಿಗಳು ಅತ್ಯಂತ ಕರುಣಾಳುಗಳು; ನಮ್ಮ ಎಲ್ಲ ಜೀವಿತಾವಧಿಗಳಲ್ಲೂ ಅವರು ನಮ್ಮೊಂದಿಗೆ ಯಾವಾಗಲೂ ಇದ್ದಾರೆ, ನಮ್ಮನ್ನು ಅತ್ಯಂತ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದಾರೆ ಮತ್ತು ಮಾರ್ಗದರ್ಶಿಸುತ್ತಿದ್ದಾರೆ, ಎನ್ನುವ ವಿಷಯಗಳು ಅಮರರವರಿಂದಲ್ಲದಿದ್ದರೆ ನಮಗೆ ತಿಳಿಯುತ್ತಿರಲಿಲ್ಲ. ಇದು ಮನುಕುಲಕ್ಕೆ ಹೊಸದಾಗಿ ತಿಳಿದುಬಂದ ವಿಷಯ, ಹೃದಯಸ್ಪರ್ಶಿ ಸಂಗತಿ ಮತ್ತು ಶರತ್ತುಗಳಿಲ್ಲದ ಪ್ರೀತಿಯ ಒಂದು ಪಾಠ.

ದೇವರು ನಮಗೆ ಜೀವನದಲ್ಲಿ ಅತ್ಯುತ್ತಮವಾದುದನ್ನು ನೀಡಿದ್ದಾನೆ, ನಾವು ಅದನ್ನು ಅನುಭವಿಸಬೇಕು ಎಂದು ಅಮರರವರು ಹೇಳಿದರು. ಅವರು ಜೀವಶಕ್ತಿಯ ಬಗ್ಗೆ ಮತ್ತು ಅದನ್ನು ನಮ್ಮ ಜೀವನದಲ್ಲಿ ಅಭಿವ್ಯಕ್ತಿಸುವುದು ಎಷ್ಟು ಮುಖ್ಯ ಎನ್ನುವುದರ ಬಗ್ಗೆ, ನಮಗೆ ಅರಿವುಂಟು ಮಾಡಿದರು. ಎಷ್ಟೇ ಸಣ್ಣದಿದ್ದರೂ ಜೀವನದ ಪ್ರತಿಯೊಂದು ಘಟನೆಯೂ ಮುಖ್ಯ ಮತ್ತು ಅದನ್ನು ಪ್ರೀತಿಯಿಂದ ನಿರ್ವಹಿಸಬೇಕು. ಜೀವನದಲ್ಲಿ ಎಲ್ಲ ಮಟ್ಟದಲ್ಲೂ ಪ್ರೀತಿಯನ್ನು ಅಭಿವ್ಯಕ್ತಿಸಬೇಕು.

ಅಮರರವರು ನಮಗೆ ಧ್ಯಾನವನ್ನು ತಂದುಕೊಟ್ಟರು. ಧ್ಯಾನವು ದೈವದ ಜೊತೆಗಿನ ನಮ್ಮ ಸಂಪರ್ಕವನ್ನು ಪುನರೂರ್ಜಿತಗೊಳಿಸಲು ಮತ್ತು ಅಂತಿಮವಾಗಿ ಜೀವನೋದ್ದೇಶವನ್ನು ಈಡೇರಿಸಲು ಸಹಾಯ ಮಾಡುತ್ತದೆ. ನಮ್ಮ ಜೀವನದ ಗುಣಮಟ್ಟವನ್ನು ಬದಲಾಯಿಸಲು ಬೇಕಿರುವುದೆಲ್ಲವನ್ನೂ ನಮಗೆ ನೀಡಿರುವುದಕ್ಕಾಗಿ ನಾವು ಅಮರರವರನ್ನು ಕೃತಜ್ಞತೆ ಮತ್ತು ಪ್ರೀತಿಯಿಂದ ಸ್ಮರಿಸಿಕೊಳ್ಳುತ್ತೇವೆ. ಅವರು ಗುರೂಜಿಯವರ ಮುಖಾಂತರ ನಮ್ಮನ್ನು ಮಾರ್ಗದರ್ಶಿಸುವುದನ್ನು ಮುಂದುವರೆಸುತ್ತಿದ್ದಾರೆ ಮತ್ತು ನಮ್ಮ ಹೃದಯಗಳಲ್ಲಿ ಸದಾ ನೆಲೆಸಿರುತ್ತಾರೆ. ■

## ಪ್ರಶ್ನೆಗಳು ಮತ್ತು ಉತ್ತರಗಳು

(ಸಂ: ಶೋಭಾ ಕೆ. ರಾವ್; ಅನು: ಉಷಾ ವಾಸನ್)

**ಪ್ರ: ಜ್ಞಾನ ಮತ್ತು ಅರಿವುಗಳ ನಡುವಿನ ವ್ಯತ್ಯಾಸವೇನು?**

ಉ: ಜ್ಞಾನವು ಒಂದು ರೀತಿಯ ಮಾಹಿತಿಯಾಗಿದೆ, ಅದು ಖಚಿತವಾದ ವಾಸ್ತವಾಂಶಗಳ ಬ್ಯಾಂಕ್ ಆಗಿದೆ. ಅರಿವು ಅದನ್ನು ಅರಿಯುವ ಸಹಜ ಶಕ್ತಿಯಾಗಿದೆ.

**ಪ್ರ: ಭೂಕಂಪದ ಸಮಯದಲ್ಲಿ ಬಿಡುಗಡೆಯಾದ ಚೈತನ್ಯಗಳು ನಮ್ಮ ಇಚ್ಛಾಸ್ವಾತಂತ್ರ್ಯವನ್ನು ನಿಯಂತ್ರಿಸಿಕೊಳ್ಳುವಲ್ಲಿ ಸಹಾಯ ಮಾಡುವುದೇ?**

ಉ: ಭೂಕಂಪದ ಚೈತನ್ಯಗಳು ನಮ್ಮನ್ನು ಶುದ್ಧಗೊಳಿಸುತ್ತವೆ, ನಮಗೆ ಆಯ್ಕೆ ಮಾಡಿಕೊಳ್ಳಲು ಮತ್ತು ಪರಿವರ್ತನೆಗೊಳ್ಳಲು ಸಹಾಯ ಮಾಡುತ್ತವೆ. ಆದರೆ ಅವು ನಮ್ಮ ಇಚ್ಛಾಸ್ವಾತಂತ್ರ್ಯದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ನಾವು ನಮ್ಮ ಇಚ್ಛಾಸ್ವಾತಂತ್ರ್ಯದ ಒಡೆಯರು. ನಾವು ನಮ್ಮ ಇಚ್ಛಾಸ್ವಾತಂತ್ರ್ಯವನ್ನು ನ್ಯಾಯಸಮ್ಮತವಾಗಿ ಬಳಸಬೇಕು.

**ಪ್ರ: ನೀವು 2012ರ ಬಗ್ಗೆ ಈ ಮೊದಲೇ ಏಕೆ ಹೇಳಲಿಲ್ಲ ಮತ್ತು ಅದರ ಸಂದೇಶವನ್ನು ಏಕೆ ಹರಡಲಿಲ್ಲ?**

ಉ: ನಾವು 'ಬೆಳಕಿನ ಕ್ರಾಂತಿ'ಯ ಬಗೆಗಿನ ಸಂದೇಶವನ್ನು ಹರಡುತ್ತಿದ್ದೇವೆ. 2008ರಲ್ಲಿ ನಾವು 'ಬೆಳಕಿನ ವಿಶ್ವಸಂಚಲನ'ವನ್ನು ಆರಂಭಿಸಿದೆವು. ನಾವು ತುಂಬಾ ಸಮಯದಿಂದ 2012ರ ಬಗ್ಗೆ ಮಾತನಾಡುತ್ತಿದ್ದೇವೆ, ನಿಮಗೆ ಅದರ ಅರಿವಿಲ್ಲ ಅಷ್ಟೆ. ಅದಕ್ಕೂ ಮುಂಚೆ ನಾವು ಅದರ ಬಗ್ಗೆ ಮಾತನಾಡಿಲ್ಲ, ಏಕೆಂದರೆ ಜನರು ಆ ಸಮಯದಲ್ಲಿ ಅದನ್ನು ಕೇಳುತ್ತಿರಲಿಲ್ಲ. ಋಷಿಗಳಿಗೆ, ಯಾವಾಗ ಹೇಳಬೇಕು ಮತ್ತು ಯಾವಾಗ ಪ್ರಾಧಾನ್ಯತೆ ಕೊಡಬೇಕು, ಎಂದು ತಿಳಿದಿರುತ್ತದೆ.

**ಪ್ರ: ಇತ್ತೀಚಿನ ವರ್ಷಗಳಲ್ಲಿ ಚಾನಲ್ ಮಾಡಿದ ಮೇಲೆ ಏನಾದರೂ ಬದಲಾವಣೆಗಳನ್ನು ಕಂಡಿದ್ದೀರಾ?**

ಉ: ನಾನು ಅನೇಕ ಬದಲಾವಣೆಗಳನ್ನು ಕಂಡಿದ್ದೇನೆ. ವೈಯಕ್ತಿಕ ಮಟ್ಟದಲ್ಲಿ ಜಾಗೃತಿಯನ್ನು ನಾನು ಕಂಡಿದ್ದೇನೆ. ಜಾಗೃತಿ ಇದ್ದೆಡೆಯಲ್ಲಿ ಇನ್ನೂ ಹೆಚ್ಚಿನ ಜಾಗೃತಿಗಳುಂಟಾಗಿವೆ. ಜನರು ಜ್ಞಾನ ಮತ್ತು ಬದಲಾವಣೆಗಳನ್ನು ಹೆಚ್ಚು ಗ್ರಹಿಸುತ್ತಿದ್ದಾರೆ. ಜನರು ಉನ್ನತ ವಿಷಯಗಳನ್ನು ಮೆಚ್ಚುತ್ತಿದ್ದಾರೆ ಮತ್ತು ಆರಿಸಿಕೊಳ್ಳುತ್ತಿದ್ದಾರೆ. ಜನರು ಎರಡು ವರುಷಗಳ ಹಿಂದೆ ಇದ್ದುದಕ್ಕಿಂತ ಭಿನ್ನವಾಗಿರುವುದನ್ನು ನಾನು ಗಮನಿಸಿದ್ದೇನೆ. ಜಾಗತಿಕ ಮಟ್ಟದಲ್ಲೂ ಬದಲಾವಣೆಗಳನ್ನು ಕಾಣಬಹುದು. ನೀವು ಜನರಲ್ಲಿ ಭ್ರಷ್ಟಾಚಾರ, ಅನ್ಯಾಯ ಇತ್ಯಾದಿಗಳ ವಿರುದ್ಧ ಅಸಹನೆ ಬೆಳೆಯುತ್ತಿರುವುದನ್ನು ಕಾಣಬಹುದು.

**ಪ್ರ: ಲೈಟ್ ಚಾನಲಿಂಗ್ ಅಷ್ಟೊಂದು ಶಕ್ತಿಶಾಲಿಯಾಗಿದ್ದರೆ, ಅಲ್ಲಿ ಕೆಲವು ಫಲಿತಾಂಶಗಳಿರಲೇಬೇಕು. ಆದರೆ ನಾವು ಯಾವುದೇ ಫಲಿತಾಂಶಗಳನ್ನು ಕಾಣುತ್ತಿಲ್ಲ. ನಾವು ಬರಿ ಭ್ರಷ್ಟಾಚಾರ ಮತ್ತು ವಿನಾಶವನ್ನು ಕಾಣುತ್ತಿದ್ದೇವೆ. ಏಕೆ?**

ಉ: ಲೈಟ್ ಚಾನಲಿಂಗ್ ಒಂದು ತುಂಬಾ ಶಕ್ತಿಶಾಲಿಯಾದ ತಂತ್ರ ಹಾಗೂ ಪ್ರಕ್ರಿಯೆ. ಭ್ರಷ್ಟಾಚಾರವೇನೋ ಇದೆ ನಿಜ. ಆದರೆ ಅದರ ಬಗ್ಗೆ ಅಸಹನೆ ಮತ್ತು ಹೋರಾಟವಿದೆ. ವಿನಾಶ ಈ ಹಿಂದೆಯೂ ಇತ್ತು, ಈಗಲೂ ಅದು ಮುಂದುವರೆದಿದೆ. ನೀವು 'ಲೈಟ್ ಚಾನಲಿಂಗ್ ಅನುಭವಗಳು' ಪುಸ್ತಕವನ್ನು ಓದಿದಾಗ, ನಿಮಗೆ ಲೈಟ್ ಚಾನಲ್‌ನ ಬೆಲೆ ತಿಳಿಯುತ್ತದೆ. ಬೆಳಕಿನಿಂದ ಕ್ರಾಂತಿ ಆಗಲೇ ಶುರುವಾಗಿದೆ. ನಿಮಗೆ ನೀವೇ ಬೆಳಕನ್ನು ಚಾನಲ್ ಮಾಡಿಕೊಂಡು, ಏನಾದರೂ ಬದಲಾವಣೆಗಳಿವೆಯೇ ಎಂದು ಏಕೆ ನೋಡಿಕೊಳ್ಳಬಾರದು? ನಾವು ಏಕೆ ಪ್ರಯತ್ನ ಪಡಬಾರದು ಮತ್ತು ಅನುಭವಿಸಬಾರದು?

**ಪ್ರ: ಬೆಳಕನ್ನು ಚಾನಲ್ ಮಾಡುವಾಗ ನಮಗೆ ವಿಷನ್‌ಗಳು ಇರುತ್ತವೆಯೇ?**

ಉ: ಇಲ್ಲ. ವಿಷನ್‌ಗಳು ಮನಸ್ಸಿಗೆ ಸಂಬಂಧಿಸಿದವು. ನಾವು ಸರಿಯಾಗಿ ಚಾನಲ್ ಮಾಡಿದಾಗ ಮನಸ್ಸು ನಿಷ್ಕ್ರಿಯವಾಗುತ್ತದೆ, ಆದ್ದರಿಂದ ಮನಸ್ಸು ವಿಷನ್‌ಗಳನ್ನು ಬಿಂಬಿಸುವುದಿಲ್ಲ.

**ಪ್ರ: ಬೆಳಕಿನ ಚಾನಲ್ ನನ್ನ ಲೌಕಿಕ ಆಕಾಂಕ್ಷೆಗಳನ್ನು ಸಾಧಿಸುವಲ್ಲಿ ಸಹಾಯ ಮಾಡುವುದೇ?**

ಉ: ಖಂಡಿತವಾಗಿಯೂ. ಬೆಳಕು ಎಲ್ಲಾ ವಿಧದಲ್ಲೂ ಸಹಾಯ ಮಾಡುತ್ತದೆ. ಆದರೆ ನೀವು ಪ್ರಯತ್ನ ಮಾಡಬೇಕು. ನೀವು ಎಲ್ಲ ಆಕಾಂಕ್ಷೆಗಳನ್ನು ನಿಜವಾಗಿಸಿಕೊಳ್ಳಬಹುದು, ಆದರೆ ಅವು ವಿವೇಕಯುಕ್ತವಾಗಿರಬೇಕು.

**ಪ್ರ: ಹೀಲಿಂಗ್ ಚೈತನ್ಯಗಳನ್ನು ಪಡೆಯುವಾಗ ನಮಗೆ ವಿಷನ್‌ಗಳು ಇರುತ್ತವೆಯೇ?**


ಉ: ನೀವು ಹೀಲಿಂಗ್ ಚೈತನ್ಯಗಳನ್ನು ಪಡೆಯುವಾಗ ಮನಸ್ಸು ಸಕ್ರಿಯವಾಗಿ ಇರುವುದಿಲ್ಲ, ಆದ್ದರಿಂದ ಅಲ್ಲಿ ವಿಷನ್‌ಗಳು ಇರುವುದಿಲ್ಲ.

**ಪ್ರ: ನನ್ನ ಧ್ಯಾನ ಏಕೆ ಮಂಕಾಗಿದೆ?**

ಉ: ಧ್ಯಾನಗಳು ಪ್ರೀತಿಯ ಕೊರತೆಯಿಂದಾಗಿ ಮಂಕಾಗುತ್ತವೆ. ಆಧ್ಯಾತ್ಮಿಕ ಪ್ರಕ್ರಿಯೆ ಯಾವಾಗಲೂ ಪ್ರೀತಿಯನ್ನು ಒಳಗೊಂಡಿರುತ್ತದೆ. ನೀವು ಧ್ಯಾನವನ್ನು ಪ್ರೀತಿಸಬೇಕು. ನಾವು ದೇವರನ್ನು ಅನುಭವಿಸಲು ಧ್ಯಾನ ಮಾಡುತ್ತೇವೆ. ದೇವರು ಯಾರು ಎಂದು ತಿಳಿಯಲು ನೀವು ಪ್ರಯತ್ನಿಸಬೇಕು, ನಿಮ್ಮಲ್ಲಿ ಪ್ರೀತಿಯಿರಲಿ ಮತ್ತು ಅವನನ್ನು ಅನುಭವಿಸುವ ಅಪೇಕ್ಷೆಯಿರಲಿ. ಆಗ ನಿಮ್ಮ ಧ್ಯಾನ ಅದ್ಭುತವಾಗಿರುತ್ತದೆ. ಪ್ರೀತಿಯ ಕೊರತೆ ಎಲ್ಲಾ ಆಧ್ಯಾತ್ಮಿಕ ಪ್ರಕ್ರಿಯೆಗಳನ್ನು ಯಾಂತ್ರಿಕವಾಗಿಸುತ್ತದೆ ಮತ್ತು ಮಂಕಾಗಿಸುತ್ತದೆ. ■


## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| 2012 - End or Beginning | 100/- |
| Preparing for 2012 | 100/- |
| Light Body & Other Realities | 75/- |
| Master-Pupil Talks | 60/- |
| iGuruji - Vol 1, 3 & 4 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis | 250/- |
| Channelled Knowledge from the Rishis-Vol-2 | 150/- |
| Guruji Speaks Part - I & II | each 200/- |
| Guruji Speaks Vol - 3 | 150/- |
| Guruji Speaks Vol - 4 & 5 | each 200/- |
| The Book of Reflections - Vol 1 & 2 | each 200/- |
| Meditators on Meditations | 75/- |
| Meditators on Experiences | 75/- |
| Meditational Experiences | 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis | 100/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| 2012 ಅಂತ್ಯ ಅಥವಾ ಆರಂಭ | 100/- |
| 2012ಕ್ಕೆ ಸಿದ್ಧತೆಗಳು | 100/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ऋषींकडून मिळालेले ज्ञान (Marathi) | 200/- |
| प्रकाशवाट (Marathi) | 150/- |
| २०१२ – अंत की आरंभ? (Marathi) | 100/- |
| २०१२ – सालाची तयारी (Marathi) | 100/- |
| आय्‌गुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु–शिष्य संवाद (Marathi) | 60/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| தியானம் செய்வது எப்படி | 50/- |
| ஒளியின் வாயில்கள் | 200/- |
| 2012 முடிவா அல்லது தொடகமா | 100/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 150/- |



ಗುರೂಜಿ ಕೃಷ್ಣಾನಂದ (1939)

## ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

RNI. No. KARKAN/2003/13739 Registered Postal Regn. No. CPMG/KA/CNA/48/2012-14
Date of posting Newsletter-25th of Every Month. Posted at Bangalore GPO No. of Pages-8

## ಆಧ್ಯಾತ್ಮಿಕ ಅನುಭವಗಳು

ಸಂ : ಶೋಭಾ ಕೆ. ರಾವ್; ಅನು: ಸ್ವರ್ಣಲತಾ

ಕೆಲವು ಸಲ ಧ್ಯಾನದಲ್ಲಿ ನಾನು ಕೇವಲ ಬೆಳಕಾಗಿರುತ್ತೇನೆ, ನನ್ನ ಭೌತಿಕ ಶರೀರದ ಅಸ್ತಿತ್ವ ಇಲ್ಲದಂತಾಗಿದ್ದರೂ, ನಾನು ಸಂಪೂರ್ಣ ಅರಿವಿನಿಂದ ಕೂಡಿರುತ್ತೇನೆ. ಈ ಅನುಭವ ಬಹಳ ಕಾಲದವರೆಗೆ ಇರುತ್ತಿತ್ತು. ಆಗ ಯಾವುದೇ ಯೋಚನೆ ಇಲ್ಲದೆ ಶೂನ್ಯತೆ ಆವರಿಸುತ್ತಿತ್ತು.

– ಆ್ಯನ್ ಚಾಪ್‌ಮನ್

29–01–2012ರಂದು ಧ್ಯಾನ ಮಾಡುತ್ತಿದ್ದಾಗ, ನನಗೆ ಬೆಳಕು ಮತ್ತು ಪ್ರೀತಿಯ ಅನುಭವವಾಯಿತು. 108 ಅಡಿ ವಿಸ್ತಾರವಾದ ನೀಲಿಬಣ್ಣದ ಬೆಳಕಿನ ಗೋಲ ಅಸ್ತಿತ್ವದಲ್ಲಿ ಇದ್ದು, ಕಣ್ಣಿಗೆ ಕಾಣಿಸುತ್ತಿತ್ತು. ನಾನೇನೂ ಮಾಡದೆ ಇದ್ದುದರಿಂದ, ಅಂತರಾಳದಲ್ಲಿ ನಿಶ್ಚಲತೆಯನ್ನು ಅನುಭವಿಸಿದೆ. ನಾನು ಅದನ್ನು ವಿಶ್ಲೇಷಿಸದೆ ಅನುಭವಿಸಲು ಪ್ರಾರಂಭಿಸಿದೆ. ನನ್ನ ಅಂತರಾಳದಲ್ಲಿ, ನಾನು ಬೆಳಕನ್ನು ಅನುಭವಿಸುತ್ತಿರುವುದರ ಅರಿವಿತ್ತು. ಎರಡು ಗಂಟೆ ಕಾಲದ ಧ್ಯಾನಾಭ್ಯಾಸದ ನಂತರವೂ ಅದೇ ಅನುಭವ ಬಹಳ ಹೊತ್ತಿನವರೆಗೆ ಇತ್ತು.

– ವಿಶ್ವಾಸ್ ದೀಕ್ಷಿತ್

ಓರಿಯಂಟೇಶನ್ ತರಗತಿಯಲ್ಲಿ ಫೋಟಾನ್ ಬೆಲ್ಟ್‌ನೆಡೆಗಿನ ಪ್ರಯಾಣ ಒಂದು ರೀತಿಯ ಸಮಾಧಾನದ ಪರಿಣಾಮವನ್ನು ನನ್ನ ಮೇಲೆ ಬೀರಿತು. ಫೋಟಾನ್ ಬೆಲ್ಟ್ ನನ್ನೊಡನೆ ಮಾತನಾಡಿತು. ಅದು, "ಜನರಿಗೆ ನನ್ನ ಬಗ್ಗೆ ಭಯವಿದೆ. ನಾನು ಕ್ರೂರಿಯಲ್ಲ. ನಾನು ನಿಮ್ಮೆಲ್ಲರನ್ನೂ ಪ್ರೀತಿಸುತ್ತೇನೆ. ನಿನ್ನಲ್ಲೂ ಅಪಾರವಾದ ಪ್ರೀತಿ ಇದೆ. ಕೇವಲ ನಿನ್ನ ಬಗ್ಗೆ ಮಾತ್ರ ನೀನು ಯೋಚಿಸಬೇಡ. ನೀನು ಬೇರೆಯವರನ್ನೂ ನಿನ್ನೊಡನೆ ಕರೆದುಕೊಂಡು ಹೋಗು," ಎಂದು ಹೇಳಿತು.

– ಅಂಜಲಿ ಪಾಟೀಲ್

ಚೈತನ್ಯವು ಮೇಲೆ ಚಿಮ್ಮಿದ ಒಂದು ಅನುಭವ ನನಗಾಯಿತು, ನಂತರ ಒಂದು ಬೆಳಕಿನ ಸ್ಫೋಟವಾಯಿತು. ಕೆಲವು ಸಲ ನನಗೆ ಅತ್ಯಂತ ಸಂತೋಷವಾಗುತ್ತದೆ ಮತ್ತು ನನ್ನ ಹೃದಯ ಭಾಗದಲ್ಲಿ ಆ ಚೈತನ್ಯಗಳು ಸ್ಫೋಟಗೊಂಡು ಬೆಳಕಿನ ವೈಶಾಲ್ಯತೆಯು ಉಂಟಾಗುತ್ತದೆ. ಆಗ ನಾನು ಎಲ್ಲಾ ಜೀವಿಗಳೊಡನೆ ಬೆಸೆದಿರುವುದು ತಿಳಿಯುತ್ತದೆ. ನನಗೆ ನನ್ನ ಕುಟುಂಬದ ಚಿಂತೆ ಕಡಿಮೆಯಾಗಿದೆ ಮತ್ತು ಭಗವಂತನ ರಕ್ಷಣೆ ಹಾಗೂ ಸಹಾಯದ ಅರಿವಾಗಿದೆ. ನನ್ನ ಭವಿಷ್ಯ ನನ್ನ ಮೂಲವಾದ ಭಗವಂತನ ಕೈಯಲ್ಲಿ ಸುರಕ್ಷಿತವಾಗಿದೆ ಎಂದು ತಿಳಿದಿದೆ.

– ಗೀತಾಂಜಲಿ ಬಾಲಕೃಷ್ಣ

ಲೈಟ್ ಚಾನಲಿಂಗ್ ದೈಹಿಕ ನೋವನ್ನು ಮೀರಿಹೋಗುವಂಥ ಸ್ಥಿತಿಯನ್ನು ಅನುಭವಿಸಲು ನನಗೆ ಸಹಾಯವಾಡಿದೆ. ಸಾಮಾನ್ಯವಾಗಿ, ನೋವಿದ್ದಾಗ ಮಾತನಾಡುವುದು ಬಹಳ ಕಷ್ಟ, ಆದರೆ ನಾನು ಬೆಳಕಿನ ಬಗ್ಗೆ ಮಾತನಾಡುವಾಗ, ಚೈತನ್ಯಗಳು ಇದ್ದಕ್ಕಿದ್ದಂತೆ ಹೆಚ್ಚಾಗಿ ಹರಿದುಬಂದು ಬಹಳ ಸಂತೋಷವಾಗುತ್ತದೆ. ಲೈಟ್ ಚಾನಲಿಂಗ್ ಸೆಷನ್ ಮುಗಿದು, ತರಗತಿಯಿಂದ ಹೊರಬಂದ ನಂತರ ನನ್ನಲ್ಲಿ ಆ ನೋವು ಪುನಃ ಕಾಣಿಸಿಕೊಳ್ಳುತ್ತದೆ.

– ಪದ್ಮಜಾ ಬಾಲಾಜಿ

ಮುಂದೊಂದು ದಿನ ಒಂದು 'ಉನ್ನತ ಶಕ್ತಿ'ಯು ಈ ಎಲ್ಲಾ ವ್ಯವಸ್ಥೆಗಳನ್ನೂ ತನ್ನ ಹಿಡಿತಕ್ಕೆ ತೆಗೆದುಕೊಳ್ಳುತ್ತದೆ. ಅದಕ್ಕೆ ಯಾವಾಗ, ಎಷ್ಟು ಚೈತನ್ಯವನ್ನು ಕೊಡಬೇಕೆಂಬುದು ತಿಳಿದಿದೆ. ಈಗ ಆ ಚೈತನ್ಯವು ನನ್ನ ತಲೆಯ ಭಾಗವನ್ನು ಆಕ್ರಮಿಸುತ್ತದೆ, ಅದು ನನ್ನನ್ನು ಇನ್ನೂ ಎತ್ತರಕ್ಕೆ ಕರೆದುಕೊಂಡು ಹೋಗುತ್ತದೆ. ಆಗ ನಾನು ಯಾವುದೋ ಮಹತ್ವವಾದ ಮತ್ತು ಶಕ್ತಿಯುತವಾದುದರೊಂದಿಗೆ ವಿಲೀನವಾಗುತ್ತೇನೆ. ನಂತರ ನನ್ನ ದೇಹವು ಅದನ್ನು ಹಿಂಬಾಲಿಸುತ್ತದೆ. ವಿಸ್ತಾರತೆ ಸಂಭವಿಸುತ್ತದೆ. ನಾನು ಈ ಚೈತನ್ಯವಲಯಕ್ಕೆ ಸಂಪರ್ಕ ಪಡೆದುಕೊಳ್ಳುತ್ತೇನೆ ಮತ್ತು ಅದರ ಮುಖಾಂತರ ಸಂವಾದ ಪ್ರಾರಂಭವಾಗುತ್ತದೆ. ಈ ಇಡೀ ಪ್ರಕ್ರಿಯೆ ನಿಜವಾಗಿಯೂ ಮನಮಿಡಿಯುವಂತಿತ್ತು!

– ವಿದ್ಯಾ ವಿಶ್ವಾಮಿತ್ರ

ನನಗೆ ಇಷ್ಟವಿಲ್ಲದ ಸ್ನೇಹಿತರೊಬ್ಬರ ಬಗ್ಗೆ ಯೋಚಿಸಿದಾಗ, ನನ್ನಲ್ಲಿ ದ್ವೇಷಭಾವ ಉಂಟಾಗುತ್ತಿತ್ತು. ನನ್ನ ನಕಾರಾತ್ಮಕ ಗುಣಗಳ ಬಗ್ಗೆ ನಾಚಿಕೆಯುಂಟಾಯಿತು. ನನ್ನ ಎಲ್ಲಾ ನಕಾರಾತ್ಮಕತೆಗಳನ್ನು ಕೊನೆಗಾಣಿಸಬೇಕೆಂದು ಬಯಸಿದೆ. ಅದಕ್ಕಾಗಿ ಪ್ರತಿದಿನ ಮಲಗುವ ಮೊದಲು ಅವಳ ತಪ್ಪುಗಳನ್ನು ಹೃತ್ಪೂರ್ವಕವಾಗಿ ಮನ್ನಿಸಿ, ನನ್ನೆಲ್ಲ ತಪ್ಪನ್ನೂ ಕ್ಷಮಿಸುವಂತೆ ದೇವರಲ್ಲಿ ಪ್ರಾರ್ಥಿಸಿದೆ. ನನ್ನಲ್ಲಿದ್ದ ಕೆಟ್ಟ ಯೋಚನೆಗಳು ನಿರ್ನಾಮವಾಯಿತು. ನಾನೀಗ ಅವಳನ್ನು ದ್ವೇಷಿಸುವುದಿಲ್ಲ.

– ವಾಸುಕಿ ಆಳ್ವಾರ್

ಈ ಧ್ಯಾನಮಾರ್ಗವನ್ನು ಸೇರುವ ಮೊದಲು ನಾನು ನರಗಳ ದೌರ್ಬಲ್ಯದಿಂದ ಬಳಲುತ್ತಿದ್ದೆ. ರಾತ್ರಿ ಸಮಯದಲ್ಲಿ ನೋವು ಹೆಚ್ಚಾಗುತ್ತಿತ್ತು ಮತ್ತು ಆ ನೋವಿನಿಂದಾಗಿ ರಾತ್ರಿ ನಿದ್ರೆ ಮಾಡಲಾಗುತ್ತಿರಲಿಲ್ಲ. ವೈದ್ಯರಿಗೂ ಸಹ ಆ ತೊಂದರೆಯನ್ನು ಗುರುತಿಸಿ ಅದಕ್ಕೆ ಔಷಧಿ ನೀಡಲು ಬಹಳ ಕಷ್ಟವಾಗುತ್ತಿತ್ತು. ಗುರೂಜಿಯವರು ಸೂಚಿಸಿದಂತೆ ನಾನು ಶಂಬಲ ನಿಯಮಗಳನ್ನು ಅಭ್ಯಾಸ ಮಾಡಲು ಆರಂಭಿಸಿದೆ. ಈಗ ನಾನು ಈ ನರದೌರ್ಬಲ್ಯದಿಂದ ಗುಣಮುಖನಾಗುತ್ತಿದ್ದೇನೆ. ಇದಕ್ಕಾಗಿ ಗುರೂಜಿಯವರಿಗೆ, ಋಷಿಗಳಿಗೆ ಹಾಗೂ ಬೆಳಕಿಗೆ ನನ್ನ ಕೃತಜ್ಞತೆಗಳು.

– ಭರತ್ ಎಸ್.

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, ಡಾ॥ ಮೋದಿ ಮುಖ್ಯ ರಸ್ತೆ, ಬೆಂಗಳೂರು – 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ